Accn. No. ....G130....

Accn 130

ಯದುಶೈಲ ಗ್ರಂಥಮಾಲೆಯ ಮೊದಲ ಹೂವು

# ಗೀತಾಸಪ್ತಾಹ

(ಭಾಷಣಗಳ ಸಂಗ್ರಹ)

ಸಂಗ್ರಾಹಕರು:

**ಅ ರೈ ಯ ರ್**

ಪ್ರಕಾಶಕರು:

ಅಧ್ಯಾಪಕ ಸಂಘ

**ಶ್ರೀ ಯದುಶೈಲ ಪ್ರೌಢಶಾಲೆ**

(ತಿರುನಾರಾಯಣಪುರಂ)

**ಮೇಲುಕೋಟೆ**

೧೯೫೧

# ಶ್ರೀ ಯದುಶೈಲ ಪ್ರೌಢಶಾಲೆ

ತಿರುನಾರಾಯಣಪುರಂ, ಮೇಲುಕೋಟೆ.

ಇಂದಿನ ವಿದ್ಯಾರ್ಥಿಗಳೇ ನಾಡಿನ ಮುಂದಾಳುಗಳು !
ಖಾಸಗಿಯಾಗಿಯೇ ನಡೆಯುತ್ತಿರುವ ಈ ಪ್ರೌಢಶಾಲೆಗೆ
ತನುಮನ ಧನಗಳಿಂದ ಎಲ್ಲವಿಧ ಸಹಾಯ
ಸಹಕಾರ ನೀಡಿ

**ದಕ್ಷಿಣದೇಶದ ಶಾಂತಿನಿಕೇತನವನ್ನಾಗಿಸಿರಿ.**

ಯದುಶೈಲ ಗ್ರಂಥಮಾಲೆಯ ಮೊದಲ ಹೂವು

# ಗೀತಾಸಪ್ತಾಹ

(ಭಾಷಣಗಳ ಸಂಗ್ರಹ)

ಸಂಗ್ರಾಹಕರು.

ಅ ರೈ ಯ ರ್

ಪ್ರಕಾಶಕರು:

ಅಧ್ಯಾಪಕ ಸಂಘ

ಶ್ರೀ ಯದುಶೈಲ ಪ್ರೌಢಶಾಲೆ

(ತಿರುನಾರಾಯಣಪುರ)

ಮೇಲುಕೋಟೆ

೧೯೫೧.

# ಪರಿವಿಡಿ

## ಪ್ರಕಾಶಕರ ಮಾತು


| | |
|---|---|
| ಗೀತೆ ಏಕೆ ಹುಟ್ಟಿಕೊಂಡಿತು | ೧ |
| ಅವತಾರ ರಹಸ್ಯ | ೩ |
| ಈಶ್ವರ ವಿಭೂತಿ | ೯ |
| ಗೀತೆಯ ಮುಖ್ಯಾರ್ಥ | ೧೫ |
| ಗೀತೆಯಲ್ಲಿ ಸಾಹಿತ್ಯ | ೨೨ |
| ಜ್ಞಾನ ಮತ್ತು ಕರ್ಮ | ೨೫ |
| ಭಕ್ತಿಯೋಗ | ೩೦ |

# ಪ್ರಕಾಶಕರ ಮಾತು

ಬಹಳ ಗೊಂದಲಗಳಿರುವ ಈ ಕಾಲದಲ್ಲಿ ಜನಕ್ಕೆ ಶಾಂತಿದೊರೆಯಲು ಆತ್ಮಶಿಕ್ಷಣ ಅಗತ್ಯ ವಿಜ್ಞಾನ ಮತ್ತಿತರ ಲೌಕಿಕ ವಿದ್ಯೆಗಳನ್ನೇ ಓದಿರುವ ಅಧ್ಯಾಪಕರಿಗೂ, ಓದುತ್ತಿರುವ ವಿದ್ಯಾರ್ಥಿಗಳಿಗೂ ಆಧ್ಯಾತ್ಮಿಕ ಪರಿಜ್ಞಾನ ಅಷ್ಟೇ ಅವಶ್ಯ. ಇಂದಿನ ಶಿಕ್ಷಣ ಪದ್ಧತಿಯಲ್ಲಿರುವ ನ್ಯೂನತೆಯನ್ನು ತಪ್ಪಿಸುವ ಸಲುವಾಗಿ ಇಂತಹ ಆಧ್ಯಾತ್ಮಿಕ ಸಮಾರಂಭಗಳು ಬೇಕು

ಈ ಉದ್ದೇಶ್ಯದಿಂದ ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಅಧ್ಯಾಪಕ ಸಂಘದ ಆಶ್ರಯದಲ್ಲಿ ನಡದ "ಗೀತಾಸಪ್ತಾಹ"ದ ಸಂದರ್ಭದಲ್ಲಿ, ಪಂಡಿತರು ನಡೆಸಿದ ಏಳು ಭಾಷಣಗಳ ಸಾರ ಸಂಗ್ರಹವನ್ನು ಪ್ರಕಟಿಸಬೇಕೆಂಬ ಕನಸು, ಶ್ರೀಯುತ ಭಾ ವಂ ರಾಘವಾಚಾರ್ಯರೇ ಮುಂತಾದ ಮಹನೀಯರ ಮಹಿಳೆಯರ ಮತ್ತು ವಿದ್ಯಾರ್ಥಿಗಳ ಸಹಕಾರದಿಂದ ಇಂದು ನನಸಾದುದಕ್ಕಾಗಿ ಗೀತಾಭಕ್ತರೆಲ್ಲರಿಗೂ ನಮ್ಮ ವಂದನೆಗಳು.

ಸಂಘದ ಕಾರ್ಯದರ್ಶಿಗಳಾದ ಶ್ರೀಯುತ ಅಯ್ಯರ್ ಇವರು ಸಪ್ತಋಷಿಗಳ ಭಾಷಣಗಳನ್ನು ಸಂಗ್ರಹಿಸಿಕೊಟ್ಟು

ಉಪಕರಿಸಿದ್ದಾರೆ. ಕನ್ನಡಸಂಘದ ಕಾರ್ಯದರ್ಶಿಗಳಾದ ಶ್ರೀಮಾನ್ ಪು ತಿ. ಕೃಷ್ಣಯ್ಯಂಗಾರ್ಯರು ಸ್ವಂತ ಕೆಲಸಗಳನ್ನು ಬಿಟ್ಟು, ಪರಸ್ಥಳದಲ್ಲಿ ಪರದಾಡಿ ಮುದ್ರಣ ಕೆಲಸದಲ್ಲಿ ನೀಡಿರುವ ನೆರವನ್ನು ಸಂಘವು ಕೃತಜ್ಞತೆಯಿಂದ ನೆನೆಯುತ್ತದೆ.

**ಗೀತಾಜಯಂತಿ** — **ಬಿ. ಎಂ. ಶೆಲ್ವಪಿಳ್ಳೆ**

ಆಶ್ವಯುಜ ಕೃಷ್ಣ — ಅಧ್ಯಕ್ಷ

ಅಮಾವಾಸ್ಯೆ. — ಅಧ್ಯಾಪಕ ಸಂಘ

೩೦ಅಕ್ಟೋಬರ್ ೧೯೫೧ — ಶ್ರೀ ಯದುಶೈಲ ಪ್ರೌಢಶಾಲೆ

(ತಿರುನಾರಾಯಣಪುರಂ)
ಮೇಲುಕೋಟೆ.

Accn. No. 6130

ಗೀತಾ ಸಪ್ತಾಹ ದಿನ: ಒಂದು

# ಗೀತೆ ಏಕೆ ಹುಟ್ಟಿಕೊಂಡಿತು ?

ಭಾಷಣಕಾರರು ಸಾಹಿತ್ಯರತ್ನ, [illegible]ವಿದ್ವಾನ್,
ಸಾಹಿತ್ಯಾಲಂಕಾರ, ಸಾಂಖ್ಯಯೋಗ ವೇದಾಂತವಿದ್ವಾನ್,
ಸಾಂಖ್ಯತೀರ್ಥ, ಶಾಸ್ತ್ರಕವಿರತ್ನ

## ಶ್ರೀ ಜಗ್ಗು ವೆಂಕಟಾಚಾರ್ಯರು

ಕೃಷ್ಣನು ಕೌರವರಿಗೂ ಪಾಂಡವರಿಗೂ ಯುದ್ಧವಾಗದಿರಲು ಬೇಕಾದ ಪ್ರಯತ್ನಪಟ್ಟನು ಕೊನೆಗೆ ಐವರಿಗೆ ಐದು ಗ್ರಾಮಗಳನ್ನಾದರೂ ಬಿಟ್ಟುಕೊಡಿರೆಂದು ಕೌರವರನ್ನು ಎಚ್ಚರಿಸಿದನು "ಪಾಂಡವರೂ ಜೀವಿಸಿ ಅದೇ ಭೂಮಿಯಲ್ಲಿ ನಾವೂ ಜೀವಿಸಲಾರೆವು" ಎಂದು ಕೌರವರು ಹೇಳಿದಮೇಲೆ ಅವರ ಇಷ್ಟಪ್ರಕಾರವೇ ಯುದ್ಧ ಅನಿವಾರ್ಯವಾಯಿತು.

ಕುರುಕ್ಷೇತ್ರದಲ್ಲಿ ಕೌರವರ ಹನ್ನೊಂದು ಅಕ್ಷೋಹಿಣೀ ಸೈನ್ಯ, ಇತ್ತ ಪಾಂಡವರ ಏಳು ಅಕ್ಷೋಹಿಣೀ ಸೈನ್ಯ ಸಿದ್ಧವಾಗಿ ನಿಂತಿದೆ. ಎರಡು ಸೈನ್ಯಗಳ ಮಧ್ಯೆ ತನ್ನ ರಥವನ್ನು ನಿಲ್ಲಿಸುವಂತೆ ಪಾರ್ಥನು ತನ್ನ ಸಾರಥಿ ಕೃಷ್ಣನಿಗೆ ಅಪ್ಪಣೆ ಮಾಡುತ್ತಾನೆ. ಆಶ್ರಿತ ಪರತಂತ್ರನಾದ ಸ್ವಾಮಿಯು ಹಾಗೆಯೇ ಮಾಡುತ್ತಾನೆ ! ಅರ್ಜುನ ನೋಡುತ್ತಾನೆ ಭೀಷ್ಮ

ಕೃಪ ಮುಂತಾದ ಆಚಾರ್ಯರೂ ಇತರ ನೆಂಟರಿಷ್ಟರೂ ನೆರ ದಿದ್ದಾರೆ. ಇವರನ್ನು ಹೇಗೆ ಕೊಲ್ಲುವುದು ! " ನೆಂಟರೊಡನೆ ಆನಂದವಾಗಿದ್ದು ಅನುಭವಿಸಬೇಕಾದ ರಾಜ್ಯವನ್ನು ಬಂಧು ಗಳನ್ನು ಕೊಂದು ಹೇಗೆ ಅನುಭವಿಸಲಿ ? " ಈ ಸಂದೇಹ ಅರ್ಜುನನ್ನು ಬಾಧಿಸುತ್ತದೆ.

ಆಗ ಕೃಷ್ಣ ತರ್ಕಬದ್ಧವಾಗಿ ಹೀಗೆ ಹೇಳುತ್ತಾನೆ " ಇರುವುದು ಎರಡು, ದೇಹ—ಐದು ಭೂತಗಳೂ ಸೇರಿ ಆದದ್ದು, ಅದರೊಳಗೆ " ಆತ್ಮ " ಎನ್ನುವುದು ಬೆಳಕಿನಂತೆ " ಜ್ಞಾನಾಕಾರ " ವಾಗಿ ಇರುವುದು. ನೀನು ಹೇಹವನ್ನು ಕೊಲ್ಲಬೇಕಾಗಿರುವುದರಿಂದ ಶೋಕಿಸುತ್ತಿದ್ದೀಯೆ ! ದೇಹ ಯಾವತ್ತಿಗೂ ಇರುವುದಿಲ್ಲ. ಸುಟ್ಟರೆ ಬೂದಿಯಾಗುವುದು, ಹೂಳಿದರೆ ಹುಳುವಾಗುವುಗು, ಕಾಗ ಹದ್ದು ತಿಂದರೆ ಅವು ಗಳ ಮಲರೂಪವಾಗುವುದು.

ಆತ್ಮನನ್ನು ಕೊಲ್ಲಬೇಕೆನ್ನುವಿಯಾ ? " ಜೀವಾತ್ಮ " ಎನ್ನುವುದು ಪರಮ ಸೂಕ್ಷ್ಮವಾದುದು, ಅದನ್ನು ಯಾರೂ ಛೇದಿಸಲಾರರು, ಸುಡಲೂ ಆರರು, ಅದು ನಿತ್ಯ. ಅದೆಂತು ಸತ್ತೀತು ?

" ನಾನುಮಾಡುತ್ತೇನೆ, " ಎನ್ನುವ ಅಹಂಕಾರ ಬಿಡು. ದೇಹ, ಜೀವಕ್ಕಿಂತ **ಪರ** ನಾದ ನನ್ನಲ್ಲಿ ಭಾರವಿಟ್ಟು ಕ್ಷತ್ರಿಯನಾದ ನೀನು, ನಿನ್ನ ಕರ್ತವ್ಯವಾದ ಯುದ್ಧಮಾಡು" ಎಂದು ಕೃಷ್ಣ ಪ್ರೇರೇಪಿಸುತ್ತಾನೆ

ಅರ್ಜುನನ ಮಟ್ಟಿಗೆ ಕುರಿತ್ತಿದ್ದಲ್ಲಿ ಗೀತೆ. "ಹೇಗೋ ಹಾಗೋ" ಎನ್ನುವ ಸಂಶಯಪ್ರತಿಯೊಬ್ಬರಿಗೂ ಬರುವಂಥದು "ಅವನವನು ತನ್ನ ವರ್ಣ, ಆಶ್ರಮಗಳಿಗೆ ಅನುಗುಣವಾದ ಕೆಲಸವನ್ನು ಮಾಡಿಯೇ ಮಾಡಬೇಕು" ಎನ್ನುವುದನ್ನು ಗೀತೆ ಉಪದೇಶಿಸುತ್ತದೆ

---

## ಗೀತಾಸಪ್ತಾಹ ದಿನ: ಎರಡು

# ಅವತಾರ ರಹಸ್ಯ

ಸಾಹಿತ್ಯ ವೇದಾನ್ತ ವಿದ್ವಾನ್ ಅಘಲಯಂ

### ಶ್ರೀ ಗೋಮಠಂ ತಿರುನಾರಾಯಣ್ಯಂಗಾರ್ಯರು

ಕೃಷ್ಣ ಗೊಲ್ಲರ ಮನೆಯಲ್ಲಿ ಬೆಳೆದ, ಸವಿಯಬೇಕೆನ್ನುವವರಿಗೆ ಆತ ಹಾಲು ಕರೆದು ಕುಡಿಸಿದ ಗೀತೆಯೇ ಆ ಹಾಲು—ಅಮೃತ. ಹಾಲು ಹೇಗೆ ಹಸುವಿನ ಸಾರವೋ ಹಾಗೆ ಉಪನಿಷತ್ತುಗಳ ಸಾರ ಈ ಗೀತೆ ಕರುವನ್ನು ಬಿಡದೆ ಹಾಲು ಕರೆಯಲಾದೀತೆ ? ಆ ಕರುವೇ ಅರ್ಜುನ. ಅವರವರ ವಿಚಾರ ಅವರವರೇ ಹೇಳಿದರೆ ಬಲು ಚೆನ್ನ. ಕೃಷ್ಣ ತನ್ನ ವಿಚಾರವನ್ನು ತನ್ನ ಬಾಯಾರ ಹೇಳುವ "ಆತ್ಮಕಥೆ" ಈ ಗೀತೆ. ಎಲ್ಲಾ ಶಾಸ್ತ್ರಗಳಲ್ಲಿಯೂ ಅಲ್ಲೊಂದು ಇಲ್ಲೊಂದು ವಿಸ್ತಾರವಾಗಿ ಹೇಳಿರುವುದನ್ನು, ಈ ಗೀತೆಯಲ್ಲಿ ಸಂಗ್ರಹಿಸಿ ಭಗವಂತ ಹೇಳಿದ್ದಾನೆ.

ಗೀತೆ ಕೇಳಲಿಕ್ಕೆ ಬುದ್ಧಿವಂತಿಕೆ ಬೇಕಿಲ್ಲ. ಪಾಂಡಿತ್ಯ ಬೇಕಿಲ್ಲ ಪ್ರೇಮ, ಭಕ್ತಿ, ಕೇಳಬೇಕೆಂಬ ಆಸಕ್ತಿ ಇಷ್ಟಿದ್ದರೆ ಸಾಕು ಭಗವಂತ ವೀರಾಸನದಲ್ಲಿ ಕುಳಿತು ಗೀತೋಪದೇಶ ಮಾಡುತ್ತಾನೆ. ಗೀತೆಯಲ್ಲಿ ಮುಖ್ಯವಾಗಿ ಹೇಳುವುದು ದೇವರನ್ನು ಪ್ರೀತಿಸುವುದು, ಅಂದರ ಭಕ್ತಿಮಾಡುವುದು. ಪ್ರೀತಿ ಉಂಟಾಗಬೇಕಾದರೆ " ವಸ್ತುಸ್ವರೂಪ " ಮೊದಲು ತಿಳಿಯ ಬೇಕು ಕೃಷ್ಣ **ದೇವರು** ಎಂಬುದು ತಿಳಿದ ಮೇಲೆ ಕೃಷ್ಣ ನಲ್ಲಿ ಭಕ್ತಿ ಹುಟ್ಟೀತು ! ಹೀಗೆ **ಅವತಾರ ರಹಸ್ಯದ ವಿಜ್ಞಾನ** ಭಕ್ತಿಗೆ ಅಂಗ.

ಇಂಥಹ ಭಕ್ತಿಯೋಗವನ್ನು ತಿಳಿಯಲು ಅರ್ಹತೆ-ಅಧಿ ಕಾರ ಅರ್ಜುನನಿಗಿದೆ. ತಿಳಿಯದಿರುವ ವಿಷಯವನ್ನು ಗುರು ವಿನಿಂದ ತಿಳಿದು ಕೊಳ್ಳಬೇಕೆಂದಿರುವವನು ಜ್ಞಾನಕ್ಕೆ **ಅಧಿಕಾರಿ.** " ಕೃಷ್ಣ ! ನೀನು ಆಶ್ರಿತಪಾವನನು. ನಾನು ದಿಗ್ಭ್ರಾಂತನಾಗಿದ್ದೇನೆ ಯಾವುದು ನನಗೆ ಶ್ರೇಯಸ್ಕರ ವೆಂದು ನಿಶ್ಚಯಿಸಿದ್ದೀಯೋ ಅದನ್ನು ನನಗೆ ಹೇಳು." ಎಂದು ಕೃಷ್ಣನಿಗೆ ಅರ್ಜುನನು ಅಡ್ಡಬಿದ್ದಿದ್ದಾನೆ. ಇಂತವನು ಅಧಿ ಕಾರಿಯಾಗಲಾರನೆ ?—ಆಗಲಾರ. ರಾಜಸೂಯಯಾಗದಲ್ಲಿ ಕೃಷ್ಣನ ವಿಚಾರ ಅರ್ಜುನನಿಗೆ ತಿಳಿದಿರುತ್ತದೆ. ಇಲ್ಲಿಯೂ **ನಾರದರೂ ಅಸಿತರೂ** ಮುಂತಾದ ಋಷಿಗಳು ಹೇಳಿ ರುವುದರ ಮೇಲೆ ಕೃಷ್ಣನಸ್ವರೂಪ ಅರ್ಜುನನಿಗೆ ತಿಳಿದೇ

ಬಿಟ್ಟಿವೆ ! ತಿಳಿದೂ ಅದೆಂತು ಕೇಳುವುದು ? ತಿಳುವಳಿಕೆ ಯಿದ್ದರೂ ಇವನಿಗುಂಟಾದ ವಿಷಾದವನ್ನು ನೋಡಿ ! ಅಜ್ಞಾನದ ಬದಲು "ವಿಷಾದ" ವೇ ಇಲ್ಲಿ "ಅಧಿಕಾರ" ವಾಗುತ್ತದೆ

ಜ್ಞಾನಯೋಗ ಮತ್ತು ಕರ್ಮಯೋಗಗಳನ್ನು ಕೃಷ್ಣ ಎರಡು ಮೂರನೆ ಅಧ್ಯಾಯಗಳಲ್ಲಿ ಹೇಳುತ್ತಾನೆ. ಈಗ ಹೇಗಾದರೂ ಯುದ್ಧಮಾಡೆಂದು ಪುಸಲಾಯಿಸಿದಮಾತಲ್ಲ ಇದು ಮನಸ್ಸೊಳಗೆ " ಶರೀರ ಅನಿತ್ಯ. ಆತ್ಮ ನಿತ್ಯ ಆತ್ಮನಿಗೂ ಅಂತರ್ಯಾಮಿಯಾಗಿ ಪರಮಾತ್ಮ ಎಲ್ಲ ಕೆಲಸಗಳನ್ನು ನಿಯಮಿಸುತ್ತಾನೆ ಕರ್ಮಮಾಡುವುದರಲ್ಲಿ ಮಾತ್ರ ಜೀವನಿಗೆ ಅಧಿಕಾರವೇ ಹೊರತು, ಕರ್ಮ ಫಲದಲ್ಲಲ್ಲ " ಎಂದು ಚೆನ್ನಾಗಿ ತಿಳಿದುಕೊಂಡು ಅವನವನ ಭಾಗದ ಕೆಲಸವನ್ನು ಮಾಡಬೇಕೆಂಬ ಈ ಜ್ಞಾನಯೋಗಗರ್ಭಿತವಾದ ಕರ್ಮಯೋಗವನ್ನು ನಿನಗಾಗಿ ಮಾತ್ರ ಈಗ ಹೇಳಿದ್ದಲ್ಲ. ಇಪ್ಪತ್ತೆಂಟು ಚತುರ್ಯುಗದ ಹಿಂದೆಯೇ ಈ ಯೋಗವನ್ನು " ವಿವಸ್ವಾನ್ " ಇವನಿಗೆ ನಾನು ಹೇಳಿದ್ದೇನೆ. ವಿವಸ್ವಾನ್ ಮನುವಿಗೆ ಹೀಗೆ ಪರಂಪರಾಪ್ರಾಪ್ತವಾದ ಈ ಕರ್ಮವಿಚಾರವನ್ನು ಹಿಂದಿನ ರಾಜರ್ಷಿಗಳೆಲ್ಲಾ ಅರಿತಿದ್ದರು " ಎನ್ನುತ್ತಾನೆ,

ಆಗ ಪ್ರಶ್ನೆ ಏಳುತ್ತದೆ. " ಕೃಷ್ಣ ! ನೀನು ನನ್ನ ಸಂಗಡಿಗ. ಈಗ ಹುಟ್ಟಿದವನು, ವಿವಸ್ವಂತನಿಗೆ ಅದೆಂತು

ಹೇಳಿದೆ ? '' ನೋಡಿ, ಇದೇ ಭಗವಂತನ ಮಾಯೆ ! ಕೃಷ್ಣನ ವಿಚಾರ ತಿಳಿದಿದ್ದರೂ ಮಂಕುಬಡಿಯಿತು ಅರ್ಜುನನಿಗೆ. ಅವನ ಕಾಲ್ಕಟ್ಟಿಯೇ ಅವನ ಮಾಯೆಯಿಂದ ನಾವು ಬಿಡಿಸಿಕೊಳ್ಳಬೇಕು.

" ಹೇ ಅರ್ಜುನ ! ನನ್ನ ಮತ್ತು ನಿನ್ನ ಜನ್ಮಗಳು ಅನೇಕವಾಗಿ ಹೋಗಿವೆ- ಅವುಗಳೆಲ್ಲವನ್ನೂ ನಾನರಿತಿರುವೆನು ನೀನು ಅರಿತಿಲ್ಲ

" ನಾನು ನಿಮ್ಮಗಳಂತೆ ಕರ್ಮಗಳಿಂದ ಹುಟ್ಟಿದವನಲ್ಲ! ನನ್ನ ಎಲ್ಲ ಬಗೆಯ ಸ್ವಭಾವಗಳನ್ನೂ ಬಿಡದೆ ನನ್ನ ಇಚ್ಛೆಯಿಂದ ನಾನು ಹುಟ್ಟುತ್ತೇನೆ.

" ಯಾವ ಯಾವ ಕಾಲದಲ್ಲಿ ಧರ್ಮವು ಮಂದಗತಿಯುಳ್ಳದ್ದಾಗುತ್ತದೆಯೋ,ಅಧರ್ಮ ಪ್ರಬಲವಾಗುತ್ತದೆಯೋ, ಆಯಾಯ ಕಾಲಗಳಲ್ಲಿ ನಾನು ಅವತರಿಸುತ್ತೇನೆ

"ಸಾಧುಗಳರಕ್ಷಣೆಗೋಸ್ಕರ ನಾನುಜನ್ಮತಾಳುತ್ತೇನೆ " ಸಾಧುಗಳೆಂದರೆ ದೇವರನ್ನು ಪ್ರೀತಿಸುವವರು ಶಬರಿ, ಗೋಪಕನ್ನಿಕೆಯರು ಇವರು ದೇವರನ್ನು ನೋಡಲು, ಮಾತಾಡಿಸಲು,ಅಪ್ಪಿಕೊಳ್ಳಲು ಹಾತೊರೆಯುತ್ತಾರೆ ದೇವರು ಆಗ ರೂಪವೆತ್ತಿ ಬರದಿದ್ದರೆ ಅವರು ದುಃಖ ತಾಳಲಾರರು ! " ಚಿಂತಯಂತಿ " ಎನ್ನುವ ಗೊಲ್ಲರ ಒಂದು ಹೊಸ ಸೊಸೆ

ಹೆಣ್ಣು ದೇವರಿಗಾಗಿ ಪ್ರಾಣತೊರೆದಿದೆ. ಹೀಗಿರುವಾಗ ಅಂತಹ ಭಕ್ತರನ್ನು ಸಂತೃಪ್ತಿಸಬೇಕಾದರೆ, ದೇವರು ರೂಪವೆತ್ತಿ ಸಾಕಾರನಾಗಿಯೇ ನಿಜವಾಗಿಯೂ ಬರಬೇಕಾಗುತ್ತದೆ. ಭಕ್ತರ ಪ್ರಾಣವುಳಿಸಲು ಬಂದಾಗಲೇ ಶತ್ರುಗಳ ಪ್ರಾಣವನ್ನೂ ಕಸಿದುಕೊಂಡು ಹೋಗಿಬಿಡುತ್ತಾನೆ ಸ್ವಾಮಿ! ಹೀಗೆ ಅವತಾರದ ಮುಖ್ಯೋದ್ದೇಶ್ಯ-ಭಕ್ತರನ್ನು ಕಾಪಾಡುವುದು ದುಷ್ಟಶಿಕ್ಷಣ ಗೌಣ.

ಧರ್ಮಸಂಸ್ಥಾಪನೆಗೆ ಅವತಾರ ಅತಿಮುಖ್ಯ. ದೇವರ ಪೂಜೆ ನಡೆಯಬೇಕಾದರೆ ದೇವರೆನ್ನುವ ವ್ಯಕ್ತಿ ಕಾಣಬೇಕು. "ಆರಾಧ್ಯಸ್ವರೂಪ" ತಿಳಿಯದ ಜನರು ಇದೆಂತು ಆರಾಧನ ನಡೆಸಿಯಾರು?

"ಭಕ್ತ ಯಾವ ಯಾವ ರೀತಿಯಲ್ಲಿ ನನ್ನನ್ನು ಅನವಟ್ಟರೆ ಆಯಾಯಾ ರೀತಿಯಲ್ಲಿ ಅವನಿಗೆ ನಾನು ತೋರಿಕೊಳ್ಳುತ್ತೇನೆ."

ಸೌಲಭ್ಯದಿಂದಲೂ, ಪರಮಾನುಗ್ರಹದಿಂದಲೂ ದೇವರು ಅವತರಿಸುತ್ತಾನೆ. ಅರ್ಜುನನಿಗೆ ಸಾರಥಿಯಾಗಿಯೇ ಒಂದು ಅವತಾರತಾಳುತ್ತಾನೆ. ಭಕ್ತರಿಂದ ಯಾವತ್ತಿಗೂ ಪೂಜೆಗೊಳ್ಳಲ್ಪಡಬೇಕೆನ್ನುವ ಪರಮ ಸೌಲಭ್ಯದಿಂದ ಅರ್ಚಾವತಾರವನ್ನು ದೇವರು ತಾಳುತ್ತಾನೆ. ಅರ್ಚಾವತಾರವೆಂದರೆ ದೇವಸ್ಥಾನದಲ್ಲಿ ಬೆಳಗುವ ನಾರಾಯಣ, ಚೆಲುವರಾಯ

ಮುಂತಾದ ದಿವ್ಯಮಂಗಳ ವಿಗ್ರಹಗಳು ಹೀಗೆ ಅಪ್ರಾಕೃತ ವಾದ ತನ್ನ ಶರೀರವನ್ನು ಪ್ರಾಕೃತ ವಸ್ತುಗಳಂತೆಯೇ ಮಾಡಿಕೊಂಡು ದೇವರು ತನ್ನ ಪರಿಪೂರ್ಣ ಸಕಲ ಕಲ್ಯಾಣ ಗಳಿಂದ ಕೂಡಿದವನಾಗಿಯೇ ಅವತರಿಸುತ್ತಾನೆ.

ದೇವರಿಗಿರುವುದು ಐದು ರೂಪ ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚೆ. ವೈಕುಂಠದಲ್ಲಿ ಇರುವುದಕ್ಕೆ "ಪರಾವತಾರ" ಹೆಸ್ರನ್ನುತ್ತಾರೆ. ದೇವತೆಗಳಿಗೆ ಕಷ್ಟಬಂ ದಾಗ ಮೊರೆಯಿಡಬೇಕಾದ ಸ್ಥಳ ಕ್ಷೀರಸಮುದ್ರ ಅಲ್ಲಿ ಮಲಗಿರುವುದೇ "ವ್ಯೂಹಾವತಾರ", ರಾಮನಾಗಿ, ಕೃಷ್ಣ ನಾಗಿ ಹುಟ್ಟಿದ್ದೇ "ವಿಭವಾವತಾರ", ಅರ್ಚಾವತಾರ ವೆನ್ನುವುದು ಶ್ರೀರಂಗಾದಿ ದಿವ್ಯಕ್ಷೇತ್ರಗಳಲ್ಲಿ ಬಿಜಯಮಾಡಿ ಸಿರುವ ದೇವರು.

ನೆಲದೊಳಗೆ ನೀರಿದೆ. ದಾಹವಾದಾಗ ಭಾವಿ ತೋಡ ಲಾದೀತೆ! ಹಾಗೆನೋಡಿ "ಅಂತರ್ಯಾಮಿ" ನಮ್ಮೊಳಗೇ ಇದ್ದಾನೆ-ಆದರೆ ಪ್ರಯೋಜನ ? ಆ ಕಾಲದಲ್ಲಿದ್ದವರಿಗೆ ರಾಮ, ಕೃಷ್ಣನ ದರ್ಶನವಾಯಿತು. ನಮಗೇನು ಅದರಿಂದ ಭಾಗ್ಯ ಬಂತು ? ಕ್ಷೀರಸಮುದ್ರಕ್ಕೆ ನಾವು ಹೋಗಲು ಶಕ್ತರಲ್ಲ. ಇನ್ನು ವೈಕುಂಠದಮಾತೇನು ? ಮಡುವಿನಲ್ಲಿ ನೀರು ತುಂಬಿ ರುವಂತೆ "ಅರ್ಚಾರೂಪಿ" ಯಾಗಿರುವವನೇ ನಮಗೆ ಪರಮಸುಲಭನು. ಬಾಯಾರಿಕೆಯಾದಾಗ ನೀರಡಿಕೆ ತೀರಿ ಸಿಕೊಳ್ಳಬಹುದು !

# ಈಶ್ವರ ವಿಭೂತಿ

ಜ್ಯೋತಿಷ-ವಿದ್ವಾನ್, ಬೆಳತೂರು,
ಶ್ರೀ ಗೋಪಾಲಯ್ಯಂಗಾರ್ಯರು

"ಈಶ್ವರ" ಎಂದರೆ ಎಲ್ಲಕ್ಕೂ ಯಜಮಾನ ಎಂದರ್ಥ. ದೇವರಿಗೆ ಎಲ್ಲವೂ ಸೇರಿವೆ. ಜ್ಞಾನವುಳ್ಳ "ಚಿತ್" ಪದಾರ್ಥಗಳೂ, ಜ್ಞಾನವಿಲ್ಲದ "ಅಚಿತ್" ಪದಾರ್ಥಗಳೂ ಅವನ ಆಳ್ವಿಕೆಗೆ ಒಳಪಟ್ಟಿವೆ. ಇನ್ನೊಂದು ವಿಧದಲ್ಲಿ ವಿಭಾಗಮಾಡ ಬಹುದಾದರೆ "ನಿತ್ಯವಿಭೂತಿ" "ಲೀಲಾ ವಿಭೂತಿ." ಎಂದರೆ ಯಾವಾಗಲೂ ಅಳಿಯದಿರುವ ವೈಕುಂಠಲೋಕ-ಪರಮಪದ-ಅದೊಂದು ಸರ್ವಶ್ರೇಷ್ಠವಾದ ಸ್ಥಾನ. ಅಲ್ಲಿನ ವರ್ಣನೆಯು ಅತ್ಯಾನಂದವನ್ನುಂಟುಮಾಡುವುದಾಗಿದೆ. ಅಲ್ಲಿ ರುವವರಿಗೆ ನಿದ್ದೆ ಬೇಕಿಲ್ಲ; ಅನ್ನಾಹಾರಬೇಕಿಲ್ಲ. ದಾಹವಿಲ್ಲ; ದುಃಖವಿಲ್ಲ. ಸದಾ ಜ್ಞಾನ ಆನಂದಗಳ ಮೊತ್ತವಾಗಿ ಭಗ ವಂತನ ಊಳಿಗದಲ್ಲಿ ಆಸಕ್ತರಾಗಿರುತ್ತಾರೆ ಅಲ್ಲಿನ "ನಿತ್ಯ ಸೂರಿಗಳು." ಭಗವಂತನಿಗೆ ಪತ್ನಿ ಉಂಟು. ಆಕೆಯನ್ನು ಲಕ್ಷ್ಮಿಯೆನ್ನುತ್ತಾರೆ. ಆಕೆಯ ಶಿಫಾರಶಿನಿಂದ ದೇವರು ನಮ್ಮನ್ನು ರಕ್ಷಿಸುತ್ತಾನೆ.

ಆತನಿಗೆ ಆರನೆಯ ಅವತಾರವೂ ಒಂದುಂಟು. ಆಚಾ ರ್ಯನಾಗಿ ಆತನೇ ಅವತರಿಸುತ್ತಾ, ನಮ್ಮಹಾಗೆಯೇ ನಮ್ಮ

ಗುರುಗಳೂ ಎನ್ನುವ ಔದಾಸೀನ್ಯ ತಪ್ಪಿಸುವುದಕ್ಕಾಗಿ ತಾನು ಆಚಾರ್ಯರಲ್ಲಿ ಅಧಿಷ್ಠಾನ ಮಾಡುತ್ತಾನೆ ಗೀತಾಚಾರ್ಯನಾಗಿ ಅವತರಿಸಿ ಭೂಮಿಯ ಭಾರವನ್ನು ಕಡಿಮೆ ಮಾಡುತ್ತಾನೆ ಇಲ್ಲದೆ ಇರುವ ಬೆಂಕಿಯು "ಲೆನ್ಸ್" ನಿಂದ ಉಂಟಾಗಿ ಹತ್ತಿಯನ್ನು ಸುಡುವಂತೆ, ಆವಾಹನ ಮಂತ್ರಗಳಿಂದ ದೇವರ ಸಾನ್ನಿಧ್ಯ ಇಂತಹ ದಿವ್ಯದೇಶಗಳಲ್ಲಿ ಉಂಟಾಗುತ್ತದೆ.

ಅಂತಃಪುರದ ಹೆಂಗಸಾದ ದ್ರೌಪದಿಯನ್ನು ಅಷ್ಟು ಮಾನಭಂಗಮಾಡಿದ ಕಾಲದಲ್ಲೂ ಭೀಷ್ಮಾಚಾರ್ಯರೇ ಮುಂತಾದ ಹಿರಿಯರೂ, ಆನೆಯ ತೋಳು ಹೊತ್ತ ಭೀಮಾದಿಗಳೂ ಸುಮ್ಮನಿರುತ್ತಾರೆ "ಇವರು ನಿಜವಾದ ನಂಟರಲ್ಲ. ಇವರು ಆಭಾಸ ಬಂಧುಗಳು ನನ್ನ ನಿರುಪಾಧಿಕ ಬಂಧು ಕೃಷ್ಣ" ಎಂದು ತೀರ್ಮಾನಿಸಿ, ದ್ರೌಪದಿಯು "ಹಾ ಕೃಷ್ಣಾ!" ಎಂದು ಕರೆಯುತ್ತಾಳೆ ಪಾಂಡವರನ್ನೇ ಕೊಂದುಬಿಡಬೇಕೆನ್ನುವಷ್ಟು ಕೋಪ ಕೃಷ್ಣನಿಗೆ ಅವರ ಮೇಲೆ ಬರುತ್ತದೆ. ಅವರು ಸುಮ್ಮನಿದ್ದುದನ್ನು ಕಂಡು ಕೃಷ್ಣ ಕುದಿಯುತ್ತಾನೆ ಆದರೆ ಐವರನ್ನೂ ಕೊಲ್ಲದೆ ಬಿಟ್ಟಿದ್ದು ದ್ರೌಪದಿಯ ಮಂಗಳಸೂತ್ರಕ್ಕಾಗಿ.

"ಯುದ್ಧವಿಲ್ಲದೆ ಒಂದು ಸೂಜಿ ಮೊನೆಯಷ್ಟು ನೆಲವನ್ನೂ ಕೊಡಲಾರನೆಂ"ದು ದುರ್ಯೋಧನ ಹೇಳಿದ ಮೇಲೆ ಯುದ್ಧ ಅನಿವಾರ್ಯವಾಗುತ್ತದೆ ಯುದ್ಧ ಪ್ರೋತ್ಸಾಹದ

ನೆಪದಿಂದ ಹೇಳಬೇಕಾದುವನ್ನೆಲ್ಲಾ ಹೇಳಿ, ಅರ್ಜುನನ
ಕೈಲಿ ಯುದ್ಧಮಾಡಿಸುತ್ತಾನೆ “ ನಿನಗೇನೂ ಸೇರಿಲ್ಲ
ಅಜುನ ! ಎಲ್ಲವೂ ನನಗೆ ಸೇರಿದ್ದು. ನಾನು ಮೊದಲೇ
ಇವರನ್ನು ಕೊಂದಿರುವೆ ನೀನು ನಿಮಿತ್ತಮಾತ್ರನಾಗು ”
ಹೀಗೆ ಎಲ್ಲ ಭಗವಂತನಿಗೆ ಸೇರಿದವು ಎಂದು ಕೃಷ್ಣ ತೋರಿಸಿ
ಕೊಟ್ಟು, ಅರ್ಜುನನ ಅಹಂಕಾರ ಮಮಕಾರಗಳನ್ನು
ಹೋಗಲಾಡಿಸುತ್ತಾನೆ “ **ಎಲ್ಲವೂ ಭಗವಂತನಿಗೆ
ಸೇರಿದ್ದು. ನಮ್ಮದಾಗಿ ಏನೂ ಇಲ್ಲ** ” ಎನ್ನು
ವುದನ್ನು ತಿಳಿದುಕೊಂಡುಬಿಟ್ಟರೆ ಜಗತ್ತು ಬಹಳ ಸುಖವಾಗಿರ
ಬಹುದು

ದೇವರನ್ನು “ ಅಖಿಲಾಂಡಕೋಟಿ ಬ್ರಹ್ಮಾಂಡ
ನಾಯಕ” ನೆನ್ನುತ್ತಾರೆ. ಕೋಟಿಕೋಟಿಬ್ರಹ್ಮಾಂಡಗಳಲ್ಲಿ
ಇದೊಂದು ಬ್ರಹ್ಮಾಂಡ ಒಂದು ಚಂಡಿಗೆ ಹೊದಿಕೆಹೊದಿಸಿ
ದಂತೆ ಬ್ರಹ್ಮಾಂಡದ ಸುತ್ತ ಏಳು ಆವರಣಗಳಿವೆ.
ಕುಂಬಾರ ನೀರಿಲ್ಲದೆ ಕೆಲಸಮಾಡಲಾರನಷ್ಟೆ ? ಹಾಗೆ
ಪ್ರಪಂಚ ಸೃಷ್ಟಿಗಾಗಿ ಬ್ರಹ್ಮಾಂಡದ ಕೆಳಭಾಗದಲ್ಲಿ“ಗರ್ಭೋ
ದಕ ” ವಿರುತ್ತದೆ. ಅದರ ಮೇಲೆ ಆದಿಕೂರ್ಮ, ಅಷ್ಟ
ದಿಗ್ಗಜಗಳು, ಅದರ ಮೇಲೆ ಆದಿಶೇಷ, ಅವನ ತಲಯಮೇಲೆ
ಮೇರುಪರ್ವತ. ಇದೇನು ನಿಜವೆ ? – ಎಂದು ಸಂಶಯಪಡ
ಬೇಡಿ. ಕೋರಿಯಾದಲ್ಲ ಯುದ್ಧವಾಗುತ್ತಿದೆ. ನಾವಾವರೂ
ನೋಡಿದ್ದೇವೆಯೇ ? ಪತ್ರಿಕೆಯ ಮೂಲಕ ತಿಳಿದುದನ್ನು

ಒಪ್ಪಿಕೊಳ್ಳುತ್ತೀವೆಯಷ್ಟೆ? ಪತ್ರಿಕಾಕಾರರನ್ನು ಪ್ರಾಮಾಣಿಕ ರೆಂದು ನಂಬುವಂತೆ ಶಾಸ್ತ್ರ ಕರ್ತೃಗಳಾದ ಋಷಿಗಳನ್ನೂ ನಾವು ನಂಬಬೇಕು.

ಸತ್ಯಲೋಕ- ಇದರಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ರಿದ್ದಾರೆ. ಇದನ್ನು "ವೈಕುಂಠ" ಎನ್ನುತ್ತಾರೆ ಸೃಷ್ಟಿ ಗಾಗಿ ಬ್ರಹ್ಮನೂ, ಸ್ಥಿತಿಗಾಗಿ ವಿಷ್ಣುವೂ, ಸಂಹಾರಕ್ಕಾಗಿ ರುದ್ರನೂ ಇರುವುದು ಇಲ್ಲಿಯೇ. ಈ ಬ್ರಹ್ಮಾಂಡವು ಚೆಂಡಿ ನಂತೆ ಎಂದು ಹೇಳಿದೆ. ರಾಜಪುತ್ರರು ವಿನೋದಕ್ಕೆ ಚೆಂಡಾಟವಾಡುವಂತೆ ದೇವರೂ ಈ ಬ್ರಹ್ಮಾಂಡವನ್ನು ತನ್ನ ಆಟದ ಸಾಮಾನನ್ನಾಗಿ ಉಪಯೋಗಿಸಿಕೊಳ್ಳುತ್ತಾನೆ. ಇದನ್ನೇ "ಭಗವಂತನ ಲೀಲೆ" ಎನ್ನುವುದು.

ಈಗ ಹೇಳುತ್ತಿರುವುದು ದೇಶವಿಭಾಗ. - ಕಾಲವಿಭಾಗ ಕುರಿತು ಮುಂದೆ ಹೇಳುತ್ತೇನೆ - ಕೆಳಗಿನಿಂದ ಮೇಲಿನವರಿ ವಿಗೂ ಮಧ್ಯದಲ್ಲಿ ಮೇರುಪರ್ವತ ಇದೆ. ಈ ಪರ್ವತದ ಸುತ್ತ ಲೋಕಗಳು ಸುತ್ತಿಕೊಂಡಿವೆ. ಕೆಳಗೆ ಅತಲ, ವಿತಲ, ಸುತಲ, ಧರಾತಲ, ರಸಾತಲ, ಮಹಾತಲ, ಪಾತಾಳಗಳೆಂಬ ಏಳು ಲೋಕಗಳಿವೆ. ಇವುಗಳ ಕೆಳಗೇ ದಕ್ಷಿಣ ಧ್ರುವ ಇರು ವುದು.

ಭೂಲೋಕ, ಸಪ್ತದ್ವೀಪ ಮತ್ತು ಸಪ್ತ ಪರ್ವತಗಳಿಂದ ಪರಿವೃತವಾಗಿದೆ. ಇದರ ಮೇಲಿರುವುದೇ ಭುವರ್ಲೋಕ.

ನೂರು ಅಶ್ವಮೇಧಯಾಗಮಾಡಿ ಇಂದ್ರಪದವಿಗೆ ಹೋಗ ತಕ್ಕವರು ಇಲ್ಲಿ ಕಾಯಬೇಕು. ಸುವರ್ಲೋಕದಲ್ಲಿಯೇ ಇಂದ್ರನಿರುವುದು. ಇದರ ಮೇಲೆ ಜನೋಲೋಕ. ಅವಾಂತರ ಪ್ರಳಯುಂಟಾದಾಗ ಇಲ್ಲಿನವರು ತಪೋಲೋಕ ಸತ್ಯಲೋ ಕಕ್ಕೆ ಹೋಗಬೇಕಾಗುತ್ತದೆ. ಸನಕಸನತ್ಕುಮಾರರು ಇರು ವುದು ತಪೋಲೋಕದಲ್ಲಿ ಇವರೇ ನಾರಾಯಣಸ್ವಾಮಿ ಯನ್ನು ಇಲ್ಲಿಗೆ ತಂದುದು. ಸತ್ಯಲೋಕದಲ್ಲಿ ಚತುರ್ಮುಖ ಬ್ರಹ್ಮ ಇರುತ್ತಾನೆ

ತಪ್ಪುಮಾಡುವವರಿಗೆ ಶಿಕ್ಷೆಕೊಡುವ ರೌರವಾದಿ ನರಕಗಳು ಇಲ್ಲಿವೆ. ಜಂಬೂದ್ವೀಪ ಎನ್ನುವುದೇ ಇದು. ಸ್ವಾಯಂಭುವಮನುವಿಗೆ ಉತ್ತಾನಪಾದ, ಪ್ರಿಯವ್ರತ ಎಂಬಿಬ್ಬರು ಮಕ್ಕಳಿದ್ದರು. ಅದರಲ್ಲಿ ಪ್ರಿಯವ್ರತನಿಗೆ ಹತ್ತುಜನ ಮಕ್ಕಳು. ಅವರಲ್ಲಿ ಮೂವರು ವಿರಕ್ತರಾಗಿ ಹೊರಟುಹೋದರು. ಮಿಕ್ಕ ಏಳು ಜನಗಳಿಗೆ ಭೂಲೋಕ ವನ್ನು ಪ್ರಿಯವ್ರತ ಹಂಚಿಕೊಟ್ಟ. ಇದರಲ್ಲಿ ಅಗ್ನೀಧ್ರ ಎಂಬುವನಿಗೆ ಜಂಬೂದ್ವೀಪ ಸಿಕ್ಕಿತು. ಅವನು ತನ್ನ ಒಂಭತ್ತು ಮಕ್ಕಳಿಗೆ ಜಂಬೂದ್ವೀಪವನ್ನು ಒಂಭತ್ತುವರ್ಷ ಗಳಾಗಿ ವಿಭಾಗಮಾಡಿಕೊಟ್ಟ. ಇವುಗಳಲ್ಲಿ ಭಾರತ ವರ್ಷ ಒಂದು. ಈಗಿನ ಪ್ರಪಂಚವೇ ಭಾರತವರ್ಷ. ದುಷ್ಯಂತನ ಮಗ ಭರತ ಈ ಭೂಭಾಗವನ್ನು ಆಳಿದುದರಿಂದ ಇಂಡಿಯಾ ದೇಶಕ್ಕೆ ಭರತಖಂಡ ಎಂದು ಹೆಸರು ಬಂತು. ಹೀಗೆ ತನ್ನ ಸ್ವತ್ತನ್ನು ಕಾಪಾಡಿ ಕೊಳ್ಳುವುದಕ್ಕಾಗಿ ದೇವರು

ಈ ಆಟವನ್ನೆಲ್ಲಾ ಆಡಿದ್ದಾನೆ !

ಇನ್ನು ಕಾಲವಿಭಾಗಕ್ಕೆ ಬರೋಣ - ಬ್ರಹ್ಮನ ಒಂದು ಹಗಲಿಗೆ ಒಂದು ಕಲ್ಪವೆನ್ನುತ್ತಾರೆ. ಬ್ರಹ್ಮನ ಒಪ್ಪತ್ತು ಎಂದರೆ ೪೩೨ ಕೋಟಿವರ್ಷಗಳು. ೮೬೪ ಕೋಟಿ ವರ್ಷ ಗಳಿಗೆ ಒಂದು ದಿನ.

ಬ್ರಹ್ಮನ ಒಂದು ಹಗಲಿನಲ್ಲಿ ಹದಿನಾಲ್ಕು ಜನ "ಮನು" ಗಳು ಬರುತ್ತಾರೆ. ಏಳನೆಯವನೇ ವೈವಸ್ವತ ಮನು. ಇವರೆಲ್ಲಾ ತಮ್ಮ ಪುಣ್ಯ ಕಳೆದ ಮೇಲೆ ಮತ್ತೆ ಭಾರತವರ್ಷಕ್ಕೆ ಬರಬೇಕಾಗುತ್ತದೆ. ಇದು ಕರ್ಮ ಭೂಮಿ. ಈಗ ನಾವಿರುವುದು ಇಪ್ಪತ್ತಾರನೆಯದಾದ ವಾರಾಹಕಲ್ಪದಲ್ಲಿ. ಬ್ರಹ್ಮನಿಗೆ ಈಗ ನಡೆಯುತ್ತಿರುವುದು ೫೧ ನೆಯ ವರ್ಷ ೨೬ ನೆಯ ದಿನ.

೧೪ ಮನುಗಳಲ್ಲಿ ಒಬ್ಬೊಬ್ಬರೂ ೭೧ಚತುರ್ಯುಗಗಳು ಆಳುತ್ತಾರೆ. ಹದಿನಾಲ್ಕು ಮನುಗಳ ಒಟ್ಟು ಆಡಳಿತಕಾಲ ೯೯೪ ಚತುರ್ಯುಗಗಳು. ೧೦೦೦ ಚತುರ್ಯುಗ ಎಂದು ಶಾಸ್ತ್ರ ಹೇಳುವುದರಲ್ಲಿ ಸಂಧಿಕಾಲವೂ ಕೂಡಿರುತ್ತದೆ. ಕೃತ, ತ್ರೇತಾ, ದ್ವಾಪರ, ಕಲಿ ಎಲ್ಲ ಸೇರಿ ೪೩೨೦೦೦೦ ವರ್ಷಗಳಾಗುವುವು. ಕಲಿಯುಗ ೪೩೨೦೦೦ ವರ್ಷಗಳು.

ಪುಷ್ಕರ ದ್ವೀಪದಲ್ಲಿ ಸೂರ್ಯ ಸುತ್ತುತ್ತಾನೆ. ಅವನು ಹಿಂದಕ್ಕೆ ನಿಲ್ಲುವುದೇ ದೈನಂದಿನಗತಿ ಎನ್ನುವುದು. ಹೀಗೆ

೩೬೫ ದಿನಕ್ಕೆ ಒಂದು ಸುತ್ತು ಬರುತ್ತಾನೆ. ಸೂರ್ಯ ಸುತ್ತುತ್ತಾನೆಯೇ ಹೊರತು ಭೂಮಿ ಸುತ್ತುವುದಿಲ್ಲ! ಕಣದಲ್ಲಿರುವ ಮೇಟಿಕಂಬದ ಸುತ್ತ ದನಗಳು ಸುತ್ತಿದರೆ ಕಾಳು ಉದುರುವುದು. ಮೇಟಿಕಂಬವೇ ಸುತ್ತಿದರೆ ಅದೆಂತಾದೀತು!

ಜನರಲ್ಲಿ ಅಹಂಕಾರ ಹೋಗಲಿ! ಋತ್ವಿಕ, ಪುರೋಹಿತ, ಎಲ್ಲರೂ ಸೇರಿದರೆತಾನೆ ಯಾಗವಾಗುವುದು? ಯಜ್ಞವನ್ನು ಒಬ್ಬನೇ ಮಾಡಲಾದೀತೆ? ಸಮಾಜದ ಕೆಲಸಗಳು ಸುಸೂತ್ರವಾಗಿ ನಡೆಯಲೊಸುಗವೇ ಚಾತುರ್ವರ್ಣ್ಯ ಉಂಟಾಗಿರುವುದು. ಕಳೆಗಳನ್ನು ಕೀಳುವಂತೆ ದುಷ್ಟರ ಧ್ವಂಸ ಆಗಲೇಬೇಕು. ಅದನ್ನೇ ಭಗವದ್ಗೀತೆಯಲ್ಲಿ ಕಾಮಕ್ರೋಧವಿಲ್ಲದೆ ಭಗವಂತ ನಡೆಸಿರುವುದು.

— —

## ಗೀತಾಸಪ್ತಾಹ ದಿನ: ನಾಲ್ಕು

# ಗೀತೆಯ ಮುಖ್ಯಾರ್ಥ

ತರ್ಕ, ವೇದಾಂತ ವಿದ್ವಾನ್ :

## ಶ್ರೀ ಸ್ಥಾನೀಕಂ ಸಂಪತ್ಕುಮಾರಾಚಾರ್ಯರು

ರಾಮಾನುಜ-ರಾಮನ ತಮ್ಮ ಲಕ್ಷ್ಮಣ-ಗೂಡೆ ಮತ್ತು ಗುದ್ದಲಿಯನ್ನು ಹೊತ್ತು ರಾಮನಿಗೆ ಮುಂದಾಗಿಯೇ ಕಾಡಿಗೆ

ಹೊರಟನಷ್ಟೆ ! ಈ ಸೇವೆಯೇ ಲಕ್ಷ್ಮಣನ ಸಿರಿ. ದ್ವಾಪರಯುಗದಲ್ಲಿ ಅದೇ ರಾಮ ರಾಮಾನುಜನಾಗಿ–ಬಲ ರಾಮನ ತಮ್ಮ ಶ್ರೀ ಕೃಷ್ಣನಾಗಿ–ಗೀತ ಉಪದೇಶಿಸಿದ.

**ಭಗವಂತನ ಸೇವೆಯೇ ಗೀತೆಯ ತಿರುಳು.**

ಚೇತನ ವರ್ಗ ಜನ್ಮವೆತ್ತುವುದು, ಸಾಯುವುದು ಈ ಚಕ್ರ ದಲ್ಲಿ ಸಿಕ್ಕಿಕೊಂಡು ತೊಳಲುತ್ತಿದೆ. ಬೆಳಗಾಯಿತೆಂದರೆ ಹಸಿವು ! ಬ್ಲಾಕ್ ಮಾರ್ಕೆಟ್ಟಿನಲ್ಲಾದರೂ ಕೊಂಡು ಜೀವ ಹೊರಯುತ್ತದೆ ಜನ ! ಶರೀರ ಇರುವವರಿಗೂ ಖಾಯಿಲೆ ಅನಿವಾರ್ಯ ಮುಪ್ಪು, ಮರಣ ಇದು ಯಾರಿಗೂ ತಪ್ಪಿದ್ದಲ್ಲ. ಸುಖಗಳನ್ನು ನೋಡೋಣ. ಅವುಗಳಿಂದ ಕೊನೆ ಕೊನೆಯಲ್ಲಿ ದುಃಖವೇ ಒದಗಿಬರುತ್ತದೆ. ಈ ರೀತಿಯ ಕಷ್ಟಗಳೆಲ್ಲವೂ ಆದ್ಯಂತವಾಗಿ ತೊಲಗಿ, ನಿತ್ಯಾನಂದದಿಂದಿರು ವುದೇ ಮೋಕ್ಷ.

ನಾವು ಮಾಡುವ ಕರ್ಮದಿಂದ ದೇವರು ನಮ್ಮನ್ನು ಬಂಧನದಲ್ಲಿರಿಸುತ್ತಾನೆ. ಅವನನ್ನೇ ಶರಣುಹೊಕ್ಕು ನಮ್ಮ ಕಷ್ಟಬಂಧನ ಬಿಡಿಸಿಕೊಳ್ಳಬೇಕು ರೇಷ್ಮೆಹುಳು ಗಂಟು ಹಾಕಿಕೊಂಡಿದ್ದನ್ನು ಅದು ತಾನೇ ಬಿಡಿಸಿಕೊಳ್ಳುವಂತೆ, ದೇವರು ಹಾಕಿದ ಗಂಟನ್ನು ದೇವರೇ ಬಿಚ್ಚಬೇಕು. ಈ ರೀತಿ ಜನ ಕಷ್ಟಪಡುವುದೇ " ಬದ್ಧದೆಶೆ " ಎನ್ನುವುದು.

ನಿತ್ಯಸುಖವನ್ನು ಹೊಂದುವ ಅವಕಾಶವಿದ್ದರೂ ಹೀಗೆ ತೊಳಲಿ ಬಳಲುತ್ತಿರುವ ಜನಗಳಿಗಾಗಿ ದೇವರು ದಯೆಯಿಂದ

ಇಂದ್ರಿಯ, ದೇಹಗಳನ್ನು ಕೊಡುತ್ತಾನೆ. ಅವನು ತನ್ನ ಸೇವೆಗೆಂದು ಕೊಟ್ಟ ಕರಣ ಕಳೇಬರಗಳನ್ನು ನಾವು ದುರುಪಯೋಗಪಡಿಸಿಕೊಳ್ಳುತ್ತೇವೆ. ಜ್ಞಾನವನ್ನು ದೇವರು ದಾನ ಮಾಡಿದ್ದಾನೆ. ವೇದಗಳ ಸಹಾಯದಿಂದ ನಾವು ಜ್ಞಾನ ಹೊಂದಬಹುದಾದರೂ,ಅವುಗಳಿಗೆ ಅರ್ಥತಿಳಿಯುವುದೇಕಷ್ಟ. ಅದಕ್ಕಾಗಿಯೇ ವ್ಯಾಸಾದಿ ಋಷಿಗಳು ಸ್ಮೃತಿ, ಇತಿಹಾಸ, ಪುರಾಣಗಳನ್ನು ರಚಿಸಿದರು. ಸ್ಮೃತಿಗಳಲ್ಲಿ ಮನುಷ್ಯನ ದಿನದ ಕೆಲಸಗಳನ್ನು ನಿರೂಪಿಸಿದೆ ; ಪುರಾಣಗಳಲ್ಲಿ ರಾಜ ವಂಶಗಳ ಚರಿತ್ರೆಗಳನ್ನು ಹೇಳಿದೆ; ಇತಿಹಾಸದಲ್ಲಿ ವೇದಾಂತ ಉಪನಿಷತ್ತುಗಳ ವಿಚಾರ ಇದೆ. ರಾಮಾಯಣವೂ ಭಾರತವೂ ಇತಿಹಾಸಗಳು. ರಾಮಾಯಣದಲ್ಲಿ ರಾಮನ ಮಹತ್ವ ಹೇಳುವಂತೆ ಮಹಾಭಾರತದಲ್ಲಿ ಕೃಷ್ಣನ ಮಹಿಮೆಯನ್ನು ಹೇಳಿದೆ. ಇದನ್ನು ಒಬ್ಬ ಕೇಳಿದರೂ, ಕೇಳಿದವರ ಕಡೆಯವರಿಗೆಲ್ಲಾ ರಾಮ ಮೋಕ್ಷ ಕೊಡುತ್ತಾನೆ. ಹಾಗೆಯೇ ಕೃಷ್ಣ ಒಂದು ಮೊಸರಿನ ಗಡಿಗೆಗೂ ಮೋಕ್ಷ ಕೊಟ್ಟಿದ್ದಾನೆ.

ಮೋಕ್ಷಪಡೆಯಲು ಎರಡು ದಾರಿ: ವರ್ಣಾಶ್ರಮೋಚಿತವಾದ ಕೆಲಸಗಳಿಂದ ಜ್ಞಾನಸಂಪಾದಿಸಿ, ಭಕ್ತಿಯಿಂದ ಮೋಕ್ಷಹೊಂದುವುದು ಒಂದು. ಮತ್ತೊಂದು " ನನಗೇನೂ ಬರದು. ದೇವರೇಗತಿ " ಎನ್ನುವ ಶರಣಾಗತಿ. ಮೊದಲನೆಯದು ಆವಶ್ಯಕ. ಏಕೆಂದರೆ ಅವನವನ ಕರ್ಮಮಾಡಿಯಲ್ಲದೆ ಪಾಪಕಳೆಯುವುದಿಲ್ಲ. ಪಾಪಹೋಗದೆ ನಿಷ್ಕೃಷ್ಟ ಜ್ಞಾನವುಂಟಾಗುವುದಿಲ್ಲ. ಜ್ಞಾನವಿಲ್ಲದೆ ಭಕ್ತಿಯಿಲ್ಲ.

ಅವರವರ ಕೆಲಸ ಅವರವರು ಮಾಡಬೇಕು ಅವರಲ್ಲಿ ಉಚ್ಚನೀಚ ಭಾವಗಳೇನೂ ಇಲ್ಲ. ಒಂದು ಮನೆಯ ಸಂಸಾರದಲ್ಲಿ' ಗಂಡನೊಂದು ಕೆಲಸವಹಿಸಿಕೊಂಡರೆ ಹೆಂಗಸೊಂದು ಕಾರ್ಯನಡೆಸಿಕೊಂಡು ಹೋಗಬೇಕು. ಸಾತ್ವಿಕ ಜೀವನ ನಡೆಸುವವನು ಒಬ್ಬನಾದರೆ ಅವನ ಸಹಾಯಕ್ಕ ರಾಜ–ಸರಕಾರ ಇರಬೇಕು. ವರ್ತಕರು ಸಾಮಾನು ಸರಬರಾಜು ಮಾಡಬೇಕು. ಸೇವಾದಳಗಳೂ ಇರಬೇಕು ರಾಜನ ಸಂದರ್ಶನ ಹೇಗೆ ಸರ್ವಸಮವ್ರೋ ಹಾಗೆ ಭಗವಂತನನ್ನು ಆಶ್ರಯಿಸುವುದರಲ್ಲಿ ಎಲ್ಲರೂ ಸರಿಸಮಾನರು. ಕೃಷ್ಣನೇ ಅಂದಿದ್ದಾನೆ " ಸಮೋಽಹಂ ಸರ್ವಭೂತೇಷು , ನಮೇ ದ್ವೇಷ್ಯೋಽಸ್ತಿನ ಪ್ರಿಯಃ " ಎಂದು **ಭಗವಂತನ ಸೇವೆಗಾಗಿಯೇ ನಾವೆಲ್ಲಾ ಇರುವುದು**- ಎಂದು ತಿಳಿದರೆ, ಕಾಮ ಕ್ರೋಧಾದಿಗಳಿರುವುದಿಲ್ಲ " ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ " ಈಶ್ವರನಿಗೇ ಎಲ್ಲ ಸೇರಿದ ಮೇಲೆ ನಮ್ಮದೇನಿದೆ ? ಇವು ನಮ್ಮದಲ್ಲವೆನ್ನುವ ತ್ಯಾಗಭಾವನೆಯಿಂದ ನಾವು ಸಾಗಬೇಕು.

ಈ ಸದ್ಭಾವನೆ ಬರಬೇಕಾದರೆ ಸಾತ್ವಿಕಾಹಾರವನ್ನು ಉಪಯೋಗಿಸಬೇಕು. ಉಪ್ಪು, ಹುಳಿ, ಖಾರಕ್ಕಿಂತ, ಸಿಹಿಯಾದ ಜಿಡ್ಡಿನಿಂದಕೂಡಿದ ಆಹಾರದಿಂದ ಸತ್ವಗುಣ ಜಾಸ್ತಿಯಾಗುತ್ತದೆ. ಮದ್ಯ, ಮಾಂಸ ಮುಂತಾದುವು ತಮೋಗುಣವನ್ನು ಹೆಚ್ಚುಮಾಡುತ್ತವೆ. ಸುಗ್ರೀವನಿಗೆ ಕೆಲವು

ಹಣ್ಣುಗಳನ್ನು ಕೊಟ್ಟರಂತೆ. ಆರು ತಿಂಗಳು ಹಸಿವಾಗು ತ್ತಿರಲಿಲ್ಲ ಅವನ್ನು ತಿಂದರೆ ! ಇಂಥ ಹಣ್ಣುಹಂಪಲುಗಳನ್ನು ನಾವು ಪತ್ತೆಹಚ್ಚಬೇಕು. ಹೊಸ ಹೊಸ ಟಾನಿಕ್ಕುಗಳೂ, ಕಾಫಿ, ಚಹಾ, ಸಿಗರೇಟುಗಳ ಉಪಯೋಗವೂ ಅನಾರೋಗ್ಯ ಉಂಟುಮಾಡುವುದಲ್ಲದೆ ಸತ್ವಗುಣವನ್ನೂ ಕಡಿಮೆಮಾಡು ತ್ತವೆ.

ಪರಮಾತ್ಮನಲ್ಲಿ ಪ್ರೀತಿಯುಂಟಾಗುವುದರ ಜೊತೆಗೆ ಇಂತಹ ವಿಷಯಗಳಲ್ಲಿ ವೈರಾಗ್ಯವೂ ಹೆಚ್ಚುತ್ತದೆ. ಹೆಂಡತಿ ಮಕ್ಕಳನ್ನು ಬಿಡಬೇಕೆಂದು ಇದರ ಅರ್ಥವಲ್ಲ. " ಈ ಪರಿಕರ ವೆಲ್ಲವೂ ಭಗವತ್ಸೇವೆಗಾಗಿ " ಎಂದು ತಿಳಿದುಕೊಳ್ಳುವುದಲ್ಲದೆ, " ಇವು ನನ್ನವಲ್ಲ" ಎನ್ನುವ ಭಾವವೂ ಇರಬೇಕು ಪಕ್ಕದ ಮನೆಯಲ್ಲಿ ಮಗುವು ಸತ್ತರೆ ನಮಗಷ್ಟು ದುಃಖವಾಗುವುದಿಲ್ಲ. ಅದೇ ನಮ್ಮ ಮನೆಯಲ್ಲಿ ಏನಾದರೊಂದು ಕೆಟ್ಟುದಾದರೆ ದುಃಖಿಸುತ್ತೇವೆ. ಹೀಗೆ ನಮ್ಮದು ಎನ್ನುವ " ಮಮಕಾರ " ವನ್ನು ಬಿಡುವುದರಲ್ಲಿಯೇ ನಿಜವಾದ ಸುಖ ಅಡಗಿದೆ.

ಯಾಜ್ಞವಲ್ಕ್ಯರ ಬಳಿ ಋಷಿಗಳೂ ಜನಕನೂ ಓದು ತ್ತಿದ್ದರು. ಜನಕನು ಬರದೆ ಪಾಠ ಆರಂಭವಾಗುತ್ತಿರಲಿಲ್ಲ ಋಷಿಗಳಿಗೆ ಇದನ್ನು ಕಂಡು ಕೊಂಚ ಅಸಮಾಧಾನ. ಗುರು ಗಳೊಮ್ಮೆ ಮಾಯೆಯಿಂದ ಋಷಿಗಳ ಗುಡಿಸಲುಗಳಿಗೆ ಬೆಂಕಿಬಿದ್ದಂತೆ ಮಾಡಿದರು. " ನನ್ನ ಕಮಂಡಲು ಹೋ ಯಿತು, ಗುಡಿಸಲು ಹೋಯಿತು ! " ಎಂದು ಪಾರಬಿಟ್ಟಿದ್ದು

ಓಡಿದರು ಗಡ್ಡದ ಜೋಗಿಗಳು. ಇನ್ನೊಮ್ಮೆ ಜನಕನ ವಿಥಿ ಲೆಗೇ ಬೆಂಕಿಬಿದ್ದಂತೆ ಯಾಜ್ಞವಲ್ಕ್ಯರು ತೋರಿಸಿದರು. ರಾಜನಿಗೆ ಸಮಾಚಾರ ಬಂತು. ಆಗ ಜನಕ ಅನ್ನುತ್ತಾನೆ: "ಮಿಥಿಲಾಯಾಂಪ್ರದೀಪ್ತಾಯಾಂ ನಮೇ ಕಿಂಚಿತ್ ಪ್ರದಹ್ಯತೇ!"-ಎಲ್ಲಾ ಭಗವಂತನಿಗೆ ಸೇರಿದ್ದು. ನನ್ನದೇನೂ ಹೋಗಲಿಲ್ಲ. ಮಿಥಿಲಾಪಟ್ಟಣವೇ ಸುಟ್ಟುಬೂದಿಯಾದರೂ ಸರಿಯೇ!"-ಎಂದು ನಿರ್ಲಿಪ್ತನಾಗಿ "ಪಾರವಾಗಲಿ!" ಎಂದು ಕುಳಿತೇಇದ್ದ.

ಒಂದನೆಯ ಅಧ್ಯಾಯದಲ್ಲಿ "ಯುದ್ಧಮಾಡುವುದರಿಂದ ನರಕವೇ ಮೋಕ್ಷವೇ"ಎಂಬುವ ಸಂಶಯುವನ್ನು ಹೊರಗೆಡವಿ, ಎರಡು,ಮೂರನೆ ಅಧ್ಯಾಯಗಳಲ್ಲಿ "ಸರಿಯಾದ ತಿಳುವಳಿಕೆಯಿಂದ ಕರ್ಮಮಾಡುವುದಾದರೆ ಮೋಕ್ಷವೇ ಸಿಕ್ಕೀತು"ಎಂದು ತತ್ತ್ವೋಪದೇಶಸಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಜ್ಞಾನದ ಮಾಹಾತ್ಮ್ಯವನ್ನು ಹೇಳಿ, ಐದನೆಯ ಅಧ್ಯಾಯದಲ್ಲಿ ಎಲ್ಲ ಜೀವಿಗಳನ್ನೂ "ಜ್ಞಾನ" ಎನ್ನುವ ಒಂದೇ ಆಕಾರದಿಂದ, ಒಂದೇ ಸಮನಾಗಿ ನೋಡಬೇಕೆಂದು ಹೇಳಿದೆ; ಆರನೆಯ, ಅಧ್ಯಾಯದಲ್ಲಿ ಮಾನವ ತನ್ನನ್ನು ತಾನು ಹೇಗೆ ನೋಡಿಕೊಳ್ಳಬೇಕೆನ್ನುವುದೂ, ಏಳನೆಯ ಅಧ್ಯಾಯದಲ್ಲಿ, ಪ್ರಯೋಜನಾಂತರವನ್ನು ಅಪೇಕ್ಷಿಸುವ ಭಕ್ತರಿಗಿಂತಲೂ ಭಗವಂತನೊಬ್ಬನನ್ನೇ ಪ್ರಯೋಜನವನ್ನಾಗಿ ಬಗೆದಿರುವ ಜ್ಞಾನಿಗಳೇ ಶ್ರೇಷ್ಠರೆಂದೂ ನಿರೂಪಿಸಲ್ಪಟ್ಟಿದೆ. ಎಲ್ಲಬಗೆಯ ಭಕ್ತರೂ ತಿಳಿಯಬೇಕಾದುದೇನು? ನಡೆಸಬೇಕಾದುದೇನು?' ಎನ್ನುವ

Accn. No ......6130..........



ಪ್ರಶ್ನೆಗೆ ಉತ್ತರವಿರುವುದು ಎಂಟನೆಯ ಅಧ್ಯಾಯದಲ್ಲಿ. ಒಂಭತ್ತನೆಯ ಅಧ್ಯಾಯದಲ್ಲಿ ಭಗವಂತನ ಮಾಹಾತ್ಮ್ಯವನ್ನೂ ಭಕ್ತಿಯೋಗದ ಸ್ವರೂಪವನ್ನೂ ವರ್ಣಿಸಿದೆ. ದೇವರಲ್ಲಿ ಸೊಗಸಾದ ಒಳ್ಳೆಯಗುಣಗಳಿರುವುದರಿಂದಲೇ ಆತನಲ್ಲಿ ಭಕ್ತಿ ಹುಟ್ಟುವುದೆಂಬುದು ಹತ್ತನೆಯ ಅಧ್ಯಾಯದ ತಿರುಳು. ಕೃಷ್ಣ ಹೇಳಿದುದೆಲ್ಲ ನಿಜವೆಂದು, ವಿಶ್ವರೂಪ ತೋರಿರುವುದೇ ಹನ್ನೊಂದನೆಯ ಅಧ್ಯಾಯದಲ್ಲಿ. ಹನ್ನೆರಡನೆಯ ಅಧ್ಯಾಯದಲ್ಲಿ "ಆತ್ಮನಿಷ್ಠೆ" ಗಿಂತಲೂ "ಭಕ್ತಿನಿಷ್ಠೆ" ಯೇ ಭಗವಂತನಿಗೆ ಬಹಳ ಪ್ರೀತಿಕರವೆಂದು ಉಕ್ತವಾಗಿದೆ. ಆತ್ಮವಿಚಾರ ಬೋಧನೆ ಹದಿಮೂರನೆಯ ಅಧ್ಯಾಯದಲ್ಲಿ ಚೆನ್ನಾಗಿ ನಡೆದಿದೆ. ಎಲ್ಲಾ ಕೆಲಸಗಳಿಗೂ ಹಿನ್ನೆಲೆಯಾಗಿ, ಸತ್ವ, ರಜಸ್ಸು, ತಮಸ್ಸು, ಈ ಗುಣಗಳೆಂಬುದು ಹದಿನಾಲ್ಕನೆಯ ಅಧ್ಯಾಯದ ನಿರೂಪಣೆ. ಎಲ್ಲವನ್ನೂ ವ್ಯಾಪಿಸಿ ಕಾಪಿಟ್ಟು, ಆಳುವುದರಿಂದಲೇ ಎಲ್ಲಕ್ಕಿಂತಲೂ ದೇವರೇದೊಡ್ಡವನೆಂದು ಹದಿನೈದನೆಯ ಅಧ್ಯಾಯ ತಿಳಿಸುತ್ತದೆ. ಹದಿನಾರನೆಯ ಅಧ್ಯಾಯದ ಸಾರಾಂಶವೇನೆಂದರೆ, ಶಾಸ್ತ್ರ ಒಪ್ಪಬೇಕೆಂಬುದೂ, ಆಸುರಪ್ರಕೃತಿಯನ್ನು ತೊರೆದು ದೈವೀಸಂಪತ್ತಿನಲ್ಲಿ ನೆಲೆನಿಲ್ಲಬೇಕೆನ್ನುವುದೇ. ಸಾತ್ವಿಕ, ರಾಜಸ, ತಾಮಸ, ಶ್ರದ್ಧೆಗಳನ್ನು ಕುರಿತು ಹೇಳಿರುವುದು ಹದಿನೇಳನೆ ಅಧ್ಯಾಯದಲ್ಲಿ. ಕೊನೆಯ ಅಧ್ಯಾಯದಲ್ಲಿ, ಸತ್ವಗುಣವೊಂದನ್ನೇ ಹೆಚ್ಚುಮಾಡಿಕೊಂಡು, ಅವನವನ ಕೆಲಸಗಳನ್ನು ಭಗವದಾರಾಧನ ರೂಪವಾಗಿ ಮಾಡಬೇಕೆಂದು ಉಪಸಂಹರಿಸಲ್ಪಟ್ಟಿದೆ.

ಗೀತೆಯ ಪಾರಾಯಣದಿಂದ ನಾವು ಎಂತಹ ಕಷ್ಟಗಳನ್ನೂ ದಾಟಬಹುದು. ಗಾಂಧಿಯವರು ಗೀತೆಯ ಸಹಾಯ

ವಿಲ್ಲದಿದ್ದರೆ "ಸ್ವಾತಂತ್ರ್ಯ" ಸಂಪಾದಿಸಲಾಗುತ್ತಿತ್ತೇ ?

---

## ಗೀತಾಸಪ್ತಾಹ ದಿನ: ಐದು

# ಗೀತೆಯಲ್ಲಿ ಸಾಹಿತ್ಯ

ಸಾಹಿತ್ಯವಿದ್ವಾನ್

### ಶ್ರೀ ಜಗ್ಗು ಆಳ್ವಾರಯ್ಯಂಗಾರ್ಯರು.

ನಮ್ಮೊಳಗಿರುವ ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸಿ ನಿರ್ಮಲವಾದ ಜ್ಞಾನದ ಬೆಳಕನ್ನು ಬೀರುವ ಸೂರ್ಯನೇ ಶ್ರೀ ಕೃಷ್ಣ "ನಾನು ಮಾಡುತ್ತೇನೆ, ನನ್ನದು" ಎನ್ನುವ ಅಹಂಕಾರ ಮಮಕಾರವಿರುವುದರಿಂದಲೇ ಪ್ರಪಂಚ ಇರುವುದು. ಇಲ್ಲದಿದ್ದರೆ ಎಲ್ಲರೂ ಮೋಕ್ಷಕ್ಕೆ ಏರಬೇಕಾಗುತ್ತಿತ್ತು ! "ಈ ಅಹಂಕಾರ ಮಮಕಾರಗಳನ್ನು ದೇವರ ಮಡಲಿಗೆ ಹಾಕುವುದೇ" ಗೀತೆಯು ನಮಗೆ ಕಲಿಸಿಕೊಡುವವಿಷಯ. ಗೀತೆಯದು ಸಾಹಿತ್ಯಶೈಲಿ. ದೃಷ್ಟಾಂತ ಕೊಟ್ಟು ಸಮಂಜಸವಾಗಿ ಅಂದವಾಗಿ, ಕಥೆ ಹೇಳುವಂತೆ ಹೇಳುವುದೇ ಸಾಹಿತ್ಯದ ಜೀವಾಳ.

"ನೀನಿದನ್ನು ಮಾಡಬೇಕು" ಎಂದು ವೇದದಂತೆ ಕಟ್ಟಾಜ್ಞೆ ಮಾಡಿದರೆ ಜನ ಕೇಳುವುದಿಲ್ಲ; ಮತ್ತೆ ಅದನ್ನು

ಮಾಡುವುದೇ ಇಲ್ಲ! ಪುರಾಣಗಳು ಗೆಳೆಯರಂತೆ ವಿಷಯ ತಿಳಿಸುತ್ತವೆ. ಹೆಂಡತಿಯ ಮಾತಿನಲ್ಲಿ ಇನಿಮೆ ಇರುವಂತೆ ಸಾಹಿತ್ಯ. ಹೆಂಡತಿಯ ಮಾತನ್ನು ಯಾರೂ ಮೀರುವುದಿಲ್ಲ. ಅರ್ಜುನ ಬಲು ಹಟಗಾರ! ಅವನ ಮನಸ್ಸಿಗೆ ಸಮಂಜಸವಾಗಿ ಒಪ್ಪಿಸದೆ ಯಾವ ಕೆಲಸವನ್ನೂ ಮಾಡಿಸಲಾಗುವುದಿಲ್ಲ. ಆದುದರಿಂದ ಬಹಳ ಉಪಾಯದಿಂದಲೇ ಅವನೊಡನೆ ಮಾತನಾಡಬೇಕಾಗುತ್ತದೆ. ಅಂತೆಯೇ ಕೃಷ್ಣ ನಗುನಗುತ್ತಲೇ ಶ್ಲೋಕರೂಪದಲ್ಲೇ ಹಾಡಿ ಎಲ್ಲವನ್ನೂ ಹೇಳುತ್ತಾನೆ.

"ಜಾತಸ್ಯಹಿ ಧ್ರುವೋ ಮೃತ್ಯುಃ-ಹುಟ್ಟಿದವನಿಗೆ ಸಾವು ಖಂಡಿತ, ನೀನೇಕೆ ಕಳವಳಪಡುತ್ತೀಯೆ" ಎಂತಹ ಯುಕ್ತಿಯುಕ್ತವಾದ ಮಾತು! ಇದಕ್ಕೆ ಯಾರಾದರೂ ಪ್ರತಿವಾದ ಮಾಡಲಾದೀತೆ ?

"ವಾಸಾಂಸಿ ಜೀರ್ಣಾನಿ ಯಥಾವಿಹಾಯ" ಹಳೆಯ ಅಂಗಿಯನ್ನು ಬಿಸುಟು ಹೊಸ ಅಂಗಿಯನ್ನು ತೊಡುವಾಗ ಯಾರಾದರೂ ದುಃಖಪಡುವರೆ ? ಜೀವಾತ್ಮಕ್ಕೆ ಶರೀರ ಅಂಗಿಯಂತೆ. ಈ ಶರೀರ ಹೋದರೆ, ಧರ್ಮಯುದ್ಧದಲ್ಲಿ ಸತ್ತರೆ, ಇದಕ್ಕಿಂತ ಉತ್ತಮಶರೀರ ಸಿಗುತ್ತದೆ ಇವರಿಗೆಲ್ಲಾ! ನೀನೇಕೆ ಕೊರಗಬೇಕು ? ಈ ದೃಷ್ಟಾಂತ ಮಕ್ಕಳಿಗೂ ತಿಳಿಯುವಂಥದು !

ಚಂಚಚ್ಚಂದ್ರಕರಸ್ಪರ್ಶ ಹರ್ಷೋನ್ಮೀಲಿತಾರಕಾ |
ಅಹೋರಾಗವತೀ ಸಂಧ್ಯಾ ಜಹಾತ ಸ್ವಯಮಂಬರಂ ||

ಇತಿಹಾಸ ಶ್ರೇಷ್ಠವಾದ ರಾಮಾಯಣದ ಈ ಶ್ಲೋಕವನ್ನು ನೋಡಿ. ಸಂಜೆ ಇಳಿಯುತ್ತಿರುವ ದೃಶ್ಯವಿದು. ಚಂದಿರನ ಕರ-ಕಿರಣ, ಸಂಜಯನ್ನು ಮುಟ್ಟಿದೆ; ಸಂತಸದಿಂದ ತಾರೆಗಳು ಮಿನುಗುತ್ತಿವೆ. ರಾಗ (ಕೆಂಪಿನಿಂದ ಕೂಡಿದ ಸಂಜೆ) ಅಂಬರ (ಆಕಾಶ) ವನ್ನು ತಾನಾಗಿ ಬಿಡುತ್ತಿದೆ. ಇದು ಸ್ವಾಭಾವಿಕ ವರ್ಣನೆಯಾದರೂ, ಚಂಪ್ರನನ್ನು ಗಂಡನನ್ನಾಗಿಯೂ, ಸಂಜಯನ್ನು ಹೆಂಡತಿಯನ್ನಾಗಿಯೂ ಭಾವಿಸಿದರೆ ಶೃಂಗಾರ ಇದರಲ್ಲಿ ತುಂಬಿರುತ್ತದೆ. "ತಾರಕೆ" ಎಂದರೆ ಕಣ್ಣುಗುಡ್ಡೆಗೂ "ರಾಗ" ಎಂದರೆ ಪ್ರೇಮಕ್ಕೂ, "ಅಂಬರ" ಎನ್ನುವುದು ಉಟ್ಟುಬಟ್ಟೆಗೂ ಹೆಸರಾಗುತ್ತದೆ.

ಕೃಷ್ಣ ಎಲ್ಲವನ್ನೂ ಹಿಡಿದು ನಿಲ್ಲಿಸಿರುವನೆಂಬ ವೇದಾಂತಕ್ಕೆ ಕೊಡುವ ಉಪಮೆ ನೋಡಿ! "ಮಯಿಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾಇವ" ಒಂದು ದಾರದಲ್ಲಿ ಅನೇಕರತ್ನಗಳನ್ನು ಪೋಣಿಸಿದಂತೆ ಎಲ್ಲವೂ ನನ್ನಲ್ಲಿವೆ.

ಯೋಗಾಭ್ಯಾಸದ ವಿಧಾನವನ್ನು ಕೃಷ್ಣ ಲಲಿತವಾಗಿ ಹೇಳಿರುವುದನ್ನು ನೋಡಿದಾಗ, ಕಾಳಿದಾಸ ಹೆಣೆದಿರುವ ಪಾರ್ವತಿಯ ಯೋಗಾಭ್ಯಾಸವರ್ಣನೆಯ ಜ್ಞಾಪಕಬರುತ್ತದೆ!

" ಪಾರ್ವತಿಯ ತಲೆಯಿಂದ ಮಳೆಯ ನೀರು ಮೂಗಿನ ತುದಿಗೆ ಬಂದು, ಎದೆಯಮೇಲೆ ಬಿದ್ದು ಚೂರಾಗುತ್ತಿತ್ತು. " ಸಮನಾಗಿ ನಟ್ಟಿಗೆ ಕುಳಿತುಕೊಳ್ಳದಿದ್ದರೆ ಹೀಗಾಗುವುದಿಲ್ಲ.

" ಎಲ್ಲಾ ಪ್ರಾಣಿಗಳೂ, ಆಕಾಶದಲ್ಲಿ ಗಾಳಿ ಇರುವಂತೆ, ಪರಮಾತ್ಮನಲ್ಲಿ ಅಡಗಿವೆ " ಎಲ್ಲಾ ಪದಾರ್ಥಗಳಿಗೂ ಆಕಾಶ ಆಸರೆಯಾದರೂ, ಆ ಪದಾರ್ಥಗಳು ಹೇಗೆ ಆಕಾಶಕ್ಕೆ ಅಂಟು ವುದಿಲ್ಲವೋ, ಹಾಗೆ ಪರಮಾತ್ಮನು ಯಾವ "ಕರ್ಮಲೇಪ" ವನ್ನೂ ಹೊಂದಿಲ್ಲ. " ಒಬ್ಬನೇ ಸೂರ್ಯ ಪ್ರಪಂಚವನ್ನೇ ಬೆಳಕುಮಾಡುವಂತೆ, ಆತ್ಮ ತನ್ನ ಜ್ಞಾನಪ್ರಸಾರದಿಂದ ಎಲ್ಲ ವನ್ನೂ ತಿಳಿಯುತ್ತಾನೆ." ಹೀಗೆ ಗೀತೆಯಲ್ಲಿ ಇನ್ನೂ ಅನೇಕ ವಾದ ದೃಷ್ಟಾಂತ ಕೊಟ್ಟು ಸಾಹಿತ್ಯಶೈಲಿಯಲ್ಲಿ ದುರ್ಗ್ರಹ ವಾದ ಅರ್ಥಗಳನ್ನೆಲ್ಲಾ ಸುಗ್ರಹವಾಗಿ ಹೇಳಿದೆ.

---

**ಗೀತಾಸಪ್ತಾಹ** **ದಿನ: ಆರು**

# ಜ್ಞಾನ ಮತ್ತು ಕರ್ಮ

ತರ್ಕ, ಧರ್ಮಶಾಸ್ತ್ರವಿದ್ವಾನ್

**ಶ್ರೀ ಎಂಬಾರ್ ನರಸಿಂಹಾಚಾರ್ಯರು**

ಜ್ಞಾನ ಮತ್ತು ಕರ್ಮ ಇವು ಅಗಾಧವಾದ ವಿಷಯ. ಪ್ರಪಂಚ ಹುಟ್ಟಿದ ಬಹುದಿನಗಳಿಂದಲೂ, ನಾವು ಸದ್ಗತಿ

ಯನ್ನೇ ಹೊಂದದೆ ಕ್ಲೇಶಪಡುತ್ತಿರುವುದನ್ನು ವಿಮರ್ಶೆ ಮಾಡಬೇಡವೇ? "ಆತ್ಮ" ಎನ್ನುವುದು ಈ ಶರೀರದೊಳಗಿರುವ ಒಂದು ಸೂಕ್ಷ್ಮ ಪದಾರ್ಥ "ಸೂಲು." ಅದು ಕಣ್ಣಿಗೆ ಕಾಣುವುದಿಲ್ಲ. ಹುಟ್ಟುವುದು ಎಂದರೆ ಆತ್ಮ ಒಂದು ಶರೀರಕ್ಕೆ ಸೇರುವುದು, ಸಾಯುವುದು ಎಂದರೆ ಆ ಶರೀರವನ್ನು ಅಗಲುವುದು. ಈ ಬಗೆಯ ಜನನ ಮರಣವನ್ನೇ "ಸಂಸಾರ" ಎಂದು ಕರೆಯುವುದು

ಇಷ್ಟು ದಿವಸಗಳಿಗೆ ನಮಗೆಷ್ಟೋ ತಂದೆತಾಯಿಗಳು ಆಗಿಬಿಟ್ಟಿದ್ದಾರೆ. ಪಶುಪಕ್ಷಿಗಳಾಗಿ ನೀಚಜನ್ಮಗಳಾಗಿದ್ದು ಈಗ ಉತ್ತಮವಾದ ಮನುಷ್ಯಜನ್ಮ ಹೊಂದಿದ್ದೇವೆ. ನಾವು ಪಡುವ ಕ್ಲೇಶಕ್ಕೆ ಕಾರಣ, "ಭಗವಂತನ ಆಜ್ಞೆಯನ್ನು ಉಲ್ಲಂಘಿಸುತ್ತಿರುವುದೇ". ರಾಜಕೀಯ ನಿಯಮಗಳನ್ನು ಮೀರುವವರಿಗೆ ಸರಕಾರ ಶಿಕ್ಷಿಸುವಂತೆ, ದೇವರ ಆಜ್ಞೆಯಾದ ಶ್ರುತಿ, ಸ್ಮೃತಿ, ಇವುಗಳನ್ನು ನಾವು ಮೀರಿ ನಡೆಯುವುದರಿಂದ ಈ ಶಿಕ್ಷೆ ಅನುಭವಿಸುತ್ತೇವೆ ಇಂದ್ರಿಯ ನಿಗ್ರಹವಿಲ್ಲದಿರುವುದರಿಂದಲೂ ನಾವು ಪತಿತರಾಗಿದ್ದೇವೆ.

ಸಂಸಾರ ಎಂದರೆ ಹೆಂಡತಿ ಮಕ್ಕಳಲ್ಲ ಅವು ಇದ್ದೇ ಇರಬೇಕು. ವಿದ್ಯಾರ್ಥಿಗಳನ್ನೂ ಪರಿವ್ರಾಜಕರನ್ನೂ ಸಾಕುವ ಭಾರ ಗೃಹಸ್ಥನ ಮೇಲಿದೆ. ಗೃಹಸ್ಥ ಹೊರಗೆ ಹೋಗಿ ಸಂಪಾದಿಸಲೇಬೇಕು. ಗರತಿ ಮನೆಯೊಳಗಿನದನ್ನು ನಿರ್ವಹಿಸಲೇಬೇಕು. ಹೆಂಗಸಿಲ್ಲದೆ ಯಜ್ಞವಿಲ್ಲ; ದಾನವಿಲ್ಲ, ಪತ್ನಿಯ

ಸಂಬಂಧವಿಲ್ಲದೆ ಯಾವ ಒಳ್ಳೆಯ ಕೆಲಸವೂ ನಡೆಯು ವಂತಿಲ್ಲ. ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸಬೇಕು. ಹೆಂಗಸಿಲ್ಲದೆ ಇದು ಆಗುವುದೆ ? ತಮ್ಮ ಮನೆಯ ದೀಪ ಉರಿ ಯಬೇಕೆಂದು ಎಲ್ಲರೂ ಮಕ್ಕಳಿಗಾಗಿ ಆಶೆಪಡುವುದು ನ್ಯಾಯವೇ; ಸತ್ಪ್ರಜೆ ಹುಟ್ಟಿ ವಂಶೋದ್ಧಾರ ಮಾಡುತ್ತಾನೆ.

ಆದರೆ ಹಿಂದೆ ಹೇಳಿದ ಜನನ ಮರಣರೂಪವಾದ ಸಂಸಾರದಿಂದ ನಾವು ಮುಕ್ತಿಹೊಂದಬೇಡವೆ ? ಈ ಶರೀರ, ತಾಯಿಯ ರೊಚ್ಚೆಯ ಗರ್ಭದಲ್ಲಿ ಒಂಭತ್ತು ತಿಂಗಳುಗಳಿರ ಬೇಕಾಗುತ್ತದೆ. ಆಗ ಗರ್ಭವಾಸದ ದುಃಖ ಆ ಶಿಶುವಿಗೆ ತಿಳಿಯುತ್ತದೆ. ನರಕಕ್ಕಿಂತಲೂ ಹೆಚ್ಚು ಕಷ್ಟವದು ಈ ಶರೀರಕ್ಕೆ ಬೆಲೆ ಕೊಡುವುದು ಇವರೊಳಗೆ ಇರುವ ಸೂಲಿಗಾಗಿ. ಆತ್ಮ ಗೂಡನ್ನು ಬಿಟ್ಟಮೇಲೆ ಈ ಶರೀರವನ್ನು ಹೊರಕ್ಕೆ ಸಾಗಿಸುವ ಯೋಚನೆಯೇ ಮುಂದಾಗುವುದಿಲ್ಲವೆ ? ರಕ್ತ ಮಾಂಸಗಳಿಂದ ತುಂಬಿದ ಈ ಶರೀರದ ವಿಚಾರವಾಗಿ ನಾವು ಅತಿಯಾಗಿ ಪ್ರೇಮವಿಡಬಾರದು.

ಮನುಷ್ಯ ಸುಖವಾಗಿರಲೆಂದೇ ಪ್ರಯತ್ನಪಡುತ್ತಾನೆ. ಆದರೆ ಅದು ಅವನಿಗೆ ಸಿಕ್ಕುವುದು ಕಷ್ಟ. ನಮ್ಮ ಜಮೀನು ಗಳನ್ನು ರಿಜಿಸ್ಟರ್ ಮಾಡಿಸುತ್ತೇವೆ. ಆದರೂ ಕೆಲವುವೇಳೆ ತೊಂದರೆಯುಂಟಾಗುತ್ತದೆ. ನಿಜವಾದ ಸುಖಯಾವುದೆಂದು ತಿಳಿಯುವುದೇ “ ಜ್ಞಾನಯೋಗ ”. ಆರೋಗ್ಯಭಾಗ್ಯ ನಿಜ ವಾದ ಸುಖವಾಗುವುದಿಲ್ಲ. ಆರೋಗ್ಯದಿಂದ ಮದಿಸಿ ಅಮಾ

ರ್ಗದಲ್ಲಿ ಪ್ರವರ್ತಿಸುವುದಕ್ಕೂ ಅವಕಾಶವಿದೆ. ಶರೀರದ ಆರೋಗ್ಯವನ್ನು ಸತ್ವಗುಣದ ಸಲುವಾಗಿ ಎಷ್ಟೋ ಅಷ್ಟು ಕಾಪಾಡಿಕೊಳ್ಳಬೇಕು. ದೀರ್ಘಾಯುಷ್ಯ ದುಃಖದಾಯಕವಾದುದು. ನೂರು ವರ್ಷ ಬದುಕಿದ್ದರೆ, ಗೃಹಕೃತ್ಯದಲ್ಲಿ ಅನೇಕ ಸಂಕಟಗಳನ್ನು ನೋಡಬೇಕಾಗುತ್ತದೆ. ಐಶ್ವರ್ಯ ತಾನೆ ಸುಖವೇ? ಧನಿಕನನ್ನು ದ್ವೇಷಿಸುವುದೇ ಹೆಚ್ಚು. ಹಣ ಸಂಪಾದಿಸುವುದು ಕಷ್ಟ ಅದನ್ನು ರಕ್ಷಿಸುವುದು ಇನ್ನೂ ಕಷ್ಟ. ಕಳ್ಳಕಾಕರಿಗೋ, ಸರಕಾರಕ್ಕೋ ಸೇರಿಹೋಗುತ್ತದೆ ಹಣ. ಹೀಗೆ ಐಹಿಕ ಸುಖ ಸುಖವಲ್ಲವೆಂದಮೇಲೆ ಆಮುಷ್ಮಿಕವಾದ ಪರಲೋಕ-ಸ್ವರ್ಗಲೋಕ, ಸುಖವೇ ಎನ್ನುವುದನ್ನು ನೋಡುವ. ಪುಣ್ಯ ಕಳೆದ ಮೇಲೆ ಮತ್ತೆ ಭೂಲೋಕಕ್ಕೆ ಬಂದುಬೀಳಬೇಕಾಗುತ್ತದೆ. ಸ್ವರ್ಗದಲ್ಲಿರುವ ಇಂದ್ರಾದಿಗಳಿಗೂ ಹಿರಣ್ಯಕಶಿಪು, ರಾವಣ ಮುಂತಾದವರಿಂದ ಪ್ರತಿಕ್ಷಣ ಭಯವಿರುತ್ತಿತ್ತು !

ದೇಶವಿಶೇಷವಾದ ವೈಕುಂಠದಲ್ಲಿ ಭಗವಂತನ ಸೇವೆಯನ್ನು ವಿಚ್ಛೇದವಿಲ್ಲದೆ ಪ್ರೀತಿಯಿಂದ ನಡೆಸುವುದೇ ಸರಿಯಾದ ಸುಖ. ವಿಶ್ವವೆಲ್ಲವೂ ನಮ್ಮ ಕರ್ಮವಶದಿಂದ ಸುಖವಾಗಿರುವಂತೆ ತೋರುವುವು. ಈ ಜೀವಾತ್ಮಕ್ಕೆ, ಸ್ವಾಭಾವಿಕವಾದ ಹಾಗೂ ನಿತ್ಯವಾದ ಪುನರಾವೃತ್ತಿಯಿಲ್ಲದಿರುವ ಸುಖ ಎಂದರೆ ದೇವರಿಗೆ ಆಳಾಗಿರುವುದೊಂದೇ. "ಸೋಹಂ" ಹೋಗಿ "ದಾಸೋಽಹಂ" ಆಗುವುದೇ ಸುಖದ ಜೀವಾಳ !

ಈ ಮೇಲೆ ಹೇಳಿದ ವಿಚಾರರವಾಗಿ ಪಡೆದುಕೊಳ್ಳುವ ಜ್ಞಾನ-ಭಕ್ತಿ, ಉಂಟಾಗಬೇಕಾದರೆ ಮನುಷ್ಯ ಅವನವನ ಪಾಲಿನ ಕರ್ಮಮಾಡಬೇಕು ಕರ್ಮವಿಲ್ಲದೆ ಯಾರೂ ಜ್ಞಾನವನ್ನು ಅಂದರೆ ಭಕ್ತಿಯನ್ನು ಹೊಂದಿಲ್ಲ. ಜ್ಞಾನಿಗಳಿಗೆ ಅಗ್ರೇಸರನಾದ ಜನಕನೂ ತನ್ನ ಕ್ಷತ್ರಿಯಕರ್ಮದಲ್ಲಿರುತ್ತಿದ್ದನು. ಕರ್ಮಮಾಡುವುದು ನರನಿಗೆ ಬಲುಸುಲಭ. ಅದು ಅವನಿಗೆ ಸ್ವಭಾವಸಿದ್ಧವಾದುದು. ಯಾರೂ ಒಂದು ಕ್ಷಣವೂ ಸುಮ್ಮನಿರರು. ಏನಾದರೊಂದು ಮಾಡುತ್ತಲೇ ಇರುವರು. ಹಾಗೆ ಮಾಡುವ ಕೆಲಸಗಳನ್ನು "ನಾನು ಮಾಡುವವನಲ್ಲ, ಇದರ ಫಲವೂ ನನಗೆ ಬೇಡ." ಎಂಬ ಫಲಸಂಗ ಕರ್ತೃತ್ವ ತ್ಯಾಗದಿಂದ ಮಾಡಿದ್ದೇ ಆದರೆ ಆತನಲ್ಲಿ ಜ್ಞಾನ-ಕರ್ಮ ಎರಡೂ ಇದ್ದಂತೆಯೇ. ಹಾಸುಹೊಕ್ಕಿನಂತೆ ಮನುಷ್ಯನ ತುಂಬು ಜೀವನವೆಂಬ ಬಟ್ಟೆಗೆ ಜ್ಞಾನ ಮತ್ತು ಕರ್ಮ ಅತ್ಯವಶ್ಯಕ. ಕರ್ಮಮಾಡದೆಯೇ ಒಡನೆಯೇ ಜ್ಞಾನಮಾರ್ಗಕ್ಕೆ ಹೋಗಿಬಿಟ್ಟರೆ ಅದರಲ್ಲಿ ಪ್ರಮಾದ ಏರ್ಪಡುವುದು. ಕರ್ಮದಲ್ಲಿ ಯಾವ ಬಗೆಯ ಪ್ರಮಾದವೂ ಇರುವುದಿಲ್ಲ.

ಜೀವ ತನ್ನನ್ನು ತಾನು ಅರಿಯುವುದೇ ಜ್ಞಾನಯೋಗದ ತಿರುಳಾದರೂ, ಭಗವಂತನನ್ನು ಪ್ರೀತಿಸುವುದು ಜ್ಞಾನವೆನಿಸಿಕೊಂಡರೂ, ಭಗವಂತನ ಭಕ್ತರಲ್ಲಿಯೂ ಗೌರವ ತೋರುವುದು ಅತ್ಯವಶ್ಯಕ. "ನಾವೆಲ್ಲಾ ದೇವರ ಮಕ್ಕಳು, ಮಕ್ಕಳನ್ನು ದ್ವೇಷಿಸಿದರೆ ತಂದೆಗೆ ಕೋಪ ಬರುತ್ತದೆ" .

ದೇಹಯಾತ್ರೆಯನ್ನು ನೋಡಿಕೊಂಡೇ ಅಂದರೆ "ಕರ್ಮ ಮಾಡಿಯೇ ಜ್ಞಾನ ಸಂಪಾದಿಸಿ, ಭಕ್ತಿಯ ಮೂಲಕ ನಿತ್ಯಾ-ನಂದವಾದ ಮುಕ್ತಿಯನ್ನು ಸಂಪಾದಿಸುವುದೇ ನಮ್ಮೆಲ್ಲರ ಕರ್ತವ್ಯ." ಇವನ್ನೇ ಭಗವಾನ್ ಅರ್ಜುನನನಿಗೆ ಗೀತೆಯಲ್ಲಿ ಹೇಳಿರುವುದು.

---

## ಗೀತಾಸಪ್ತಾಹ ದಿನ: ಏಳು

# ಭಕ್ತಿಯೋಗ

ಧರ್ಮಶಾಸ್ತ್ರ ವೇದಾನ್ತ ವಿದ್ವಾನ್

## ಶ್ರೀ ಶ್ರೀರಂಗಂ ಸಂಪತ್ಕುಮಾರಾಚಾರ್ಯರು

ಹೇಳಿದ್ದನ್ನೇ ಹೇಳಿದರೂ ರುಚಿಸುವಂಥದು ಪರಮಾ-ತ್ಮನ ವಿಚಾರ! ಅದು ಹೊಸಹೊಸತಾಗಿಯೇ ಇರುತ್ತದೆ ಜಗತ್ತನ್ನು ಸೃಷ್ಟಿಸಿ ಸ್ಥಿತಿ ಮತ್ತು ಸಂಹಾರಗಳನ್ನು ಮಾಡು ವಾತನನ್ನೇ "ದೇವರು" ಎನ್ನುವುದು. ಅಂಥ ದೇವರೇ ವ್ಯಾಸಮಹರ್ಷಿಯಾಗಿ ಅವತರಿಸಿ ಮಹಾಭಾರತವನ್ನ ಬರೆ-ದುದು. ಅದರಲ್ಲಿ ತಿರುಳಾದುದೇ ಭಗವದ್ಗೀತೆ ಸಾಕ್ಷಾತ್ ಕೃಷ್ಣನೇ ಹೇಳಿದುದರಿಂದ ಭಗವದ್ಗೀತೆ ಶ್ರೇಷ್ಠವಾದ ಒಂದು ಆಧಾರ ಗ್ರಂಥ. ದೇವರು "ಪರಮಪದ" ಬಿಟ್ಟು ಕೃಷ್ಣ ನಾಗಿ ಅವತರಿಸಿದ್ದಕ್ಕೆಕಾರಣವನ್ನು "ನಮ್ಮಾಳ್ವಾರ್" ಎಂಬ ಭಕ್ತಾಗ್ರಣಿಗಳು ಬಲು ಸೊಗಸಾಗಿ ಹೇಳಿದ್ದಾರೆ. "ವೈಕುಂಠ

ದಲ್ಲಿ ದೇವರಿಗೆ ಸ್ನಾನಮಾಡಿಸಿ, ಸಿಂಹಾಸನದ ಮೇಲೆ ಕುಳ್ಳಿ-ರಿಸಿ ಧೂಪಹಾಕಿದ್ದಾರೆ. ತಿನ್ನುವುದಕ್ಕೆ ಅಲ್ಲೇನೂ ಇಲ್ಲ ವಲ್ಲಾ ಎಂಬ ಕೊರತೆಯಿಂದ ಧೂಪದ ಮರೆಯಲ್ಲಿ ಮೆಲ್ಲನೆ ನುಸಿದು, ಭೂಮಿಗೆ ಧುಮಿಕಿಬಿಟ್ಟ ! ಮೃದುಸ್ವಭಾವನಾದ ಭಗವಾನ್ ಮೃದುವಾದ ಬೆಣ್ಣೆಯನ್ನೇ ಮೆಲ್ಲುವ ಸಲು-ವಾಗಿ ಗೊಲ್ಲರ ಮನೆಯಲ್ಲಿ ಹುಟ್ಟಿ ಕೊಂಡ. ! "

ಶಾಸನಸಭೆ ತಯಾರಿಸುವ "ಬೈಲಾ"ದಂತೆ "ಶಾಸ್ತ್ರ" 'ಶಾಸನಾತ್ ಶಾಸ್ತ್ರಂ." ಹಿಂದೂ ಧರ್ಮದಲ್ಲಿ ಜನ್ಮಾಂತರ ವನ್ನು ಒಪ್ಪಬೇಕಾಗುತ್ತದೆ. ಹಿಂದಿನ ಜನ್ಮದಲ್ಲಿ ಯಾರನ್ನಾದರೂ ಬೈದರೆ ಈ ಜನ್ಮದಲ್ಲಿ, ಬಾಯಿಬಿಟ್ಟು ಮಾತಾಡಲು ಶಕ್ತಿಯಿಲ್ಲದ ಪಕ್ಷಿಯಾಗಿಯೋ ಮೃಗವಾಗಿಯೋ ಹುಟ್ಟಬೇಕಾಗುವುದು. ಮಾನಸಿಕವಾದ ದೋಷಗಳಿಂದ ಅಂತ್ಯ ಜಾತಿ ಬರುತ್ತದೆ. ಪ್ರಪಂಚದಲ್ಲಿ ಕಾಣುತ್ತಿರುವ ವ್ಯತ್ಯಾಸ ಗಳಿಗೆ ಅವರವರ ಕರ್ಮವೇ ಕಾರಣವೆನ್ನುವುದು ಪ್ರಾಮಾಣಿಕ ವಾಗಿ ವಿಮರ್ಶಿಸುವವರಿಗೆ ತಿಳಿದೀತು ! ದೇಶದ ಸಕಲ ಪ್ರಜೆ ಗಳಿಗೂ ಸಮವಾದ ಹಕ್ಕುಬಾಧ್ಯತೆಗಳಿದ್ದರೂ ತಪ್ಪುಮಾಡಿ ದವರು ಜೈಲಿನಲ್ಲಿ ಕೊಳೆಯುವುದಿಲ್ಲವೆ ? ಅರ್ಹತೆಯನ್ನು ಒಂದೇ ಜನ್ಮದಲ್ಲಿ ಅಳೆಯುವ ನೀತಿಯು ಹಿಂದೂ ಧರ್ಮಕ್ಕೆ ವಿರುದ್ಧವಾದುದು. ಆದುದರಿಂದಲೇ ವರ್ಣಾಶ್ರಮ ಧರ್ಮ-ಗಳಿಗೆ ತಲೆಬಾಗಬೇಕೆಂದು ಗೀತೆ ಘೋಷಿಸುತ್ತದೆ.

ಅವನವನ ಕರ್ತವ್ಯವನ್ನು ಪರಿಪಾಲಿಸುತ್ತಿದ್ದರೆ 'ಜ್ಞಾನ' ಉಂಟಾಗುವುದು ಆ " ಜ್ಞಾನ " ಬಲಿತರೆ ದೇವರಲ್ಲಿ ಭಕ್ತಿ ಯುಂಟಾಗುವುದು. ಅಂತಹ ಭಕ್ತಿಯಿಂದಲೇ ದೇವರು ಗೋಚರಿಸುವುದು. ಪರಮಾತ್ಮನಲ್ಲಿಪ್ರೀತಿಯುಂಟಾಯಿತೆಂದರೆ, ಇತರ ವಿಷಯಗಳಲ್ಲಿ ಅಪ್ರೀತಿ ಸಹಜವಾಗಿಯೇ ಬೆಳೆಯು ವುದು ಪುರುಷಾಕಾರನಾಗಿಯೇ ದೇವರು ಭಕ್ತರಿಗೆ ಕಾಣಿಸಿ-ಕೊಳ್ಳುತ್ತಾನೆ " ಅಂಗಡಿಯಲ್ಲಿ ದುಡ್ಡಿನಿಂದ ಸಾಮಾನು ಕೊಳ್ಳುವಂತೆ, ಭಕ್ತಿಯಿಂದ ಭಗವಂತನನ್ನು ಕೊಂಡುಕೊಂಡು ಬಿಡಬಹುದು. " ಮುಕ್ತಿಯೆಂದರೆ ಮಹಾನಂದ. ಅದನ್ನು ಹೊಂದಲುಬೇಕಾದ ಭಕ್ತಿಯನ್ನೇ ಉಪಾಸನೆ, ಸ್ಮರಣ, ಧ್ಯಾನ, ವೇದನ, ಇನ್ನೂ ಮುಂತಾದ್ದಾಗಿ ಹೇಳುವುದು. ಕರ್ಮ, ಜ್ಞಾನದಿಂದ ಮನಸ್ಸು ಒಂದು ಹಿಡಿತಕ್ಕೆ ಬರುವುದು. ಆಮೇಲೆ ಭಕ್ತಿ ಸುಲಭವಾಗುತ್ತದೆ. ಭಗವಂತನನ್ನು ನಾವು ಪ್ರೀತಿಸಿದರೆ, ಆತನೂ ನಮ್ಮನ್ನು ಪ್ರೇಮದಿಂದ ಕಾಣುತ್ತಾನೆ. ಅವನ ಪ್ರೇಮಪ್ರವಾಹ ಹರಿಯಿತೆಂದರೆ ನಮ್ಮ ಪಾಪಗಳೆಲ್ಲಾ ಕೊಚ್ಚಿಹೋಗುವುವು.

" ಅನನ್ಯ ಭಕ್ತಿ " ಯಿಂದಲೇ ತನ್ನನ್ನು ವಶಪಡಿಸಿ ಕೊಳ್ಳಬಹುದೆಂದು ಕೃಷ್ಣ ಹೇಳುತ್ತಾನೆ–ತುಳಸಿಯನ್ನೋ, ಹೂವನ್ನೋ, ಹಣ್ಣನ್ನೋ, ಕೊನೆಗೆ ನೀರೊಂದನ್ನು ಕೊಟ್ಟರೂ ಆತನು ಶಿರಸಾ ಸ್ವೀಕರಿಸುತ್ತಾನೆ. ಮುಳ್ಳಿನ ಹೂವಾದರೂ ಆಗಬಹುದೆಂದು ಆಳ್ವಾರ್ ಹೇಳುತ್ತಾರೆ. ಮುಳ್ಳುಹೂ ಕೂಡ

ದೆಂದು ಶಾಸ್ತ್ರ ಹೇಳುವುದು ಅದನ್ನು ಕುಯ್ಯುವಾಗ ಭಕ್ತನಿಗೆ ನೋವಾದೀತೆಂಬ ಭಗವದಭಿಪ್ರಾಯದಿಂದಲೇ ಹೊರತು ಅವನಿಗಾಗದುದೇ ಇಲ್ಲ !

ಮಧುರೆಯ ಚಿಕ್ಕಬೀದಿಯ ಮೂಲೆಯೊಂದರಲ್ಲಿ ಮನೆ ಮಾಡಿಕೊಂಡಿದ್ದ "ಮಾಲಾಕಾರ" ನ ಮನೆಗೆ ಹೋಗಿ ಕೃಷ್ಣ, ಬಲರಾಮ, ಹೂವನ್ನು ಕೇಳಿದಾಗ ಆತ ಧನ್ಯನಾಗುತ್ತಾನೆ. ಫಲಕೊಟ್ಟವರಲ್ಲಿ "ಶಬರಿ" ಮುಖ್ಯಳೆನ್ನುವುದು ಎಲ್ಲರಿಗೂ ಗೊತ್ತು. ವೇದದಿಂದಲೂ ತಪಸ್ಸಿನಿಂದಲೂ ಭಗವಂತ ಸಿಗದಿರಲು "ಅನನ್ಯ ಭಕ್ತಿ" ಯಿಂದ ದೊರೆತುಬಿಡುವನು ! ಆಳ್ವಾರ್ ಅನ್ನುತ್ತಾರೆ "ಅಂದದ ಚಕ್ರಧರಿಸಿ, ನನ್ನ ಹೃದಯವನ್ನು ನೀನು ಹೊಕ್ಕಿರುವೆ. ಎಲ್ಲಾ ಬ್ರಹ್ಮಾಂಡಗಳನ್ನು ಹೊಟ್ಟೆಯಲ್ಲಿ ಹೊತ್ತ 'ನೀನು' ದೊಡ್ಡವನೋ, 'ನನ್ನನ್ನು' ಒಳಗಿಟ್ಟಿರುವ ನಾನು ದೊಡ್ಡವನೋ ?."

ಗರಡಿಮನೆಗೆ ಹೋದೊಡನೆಯೇ ನೂರಾರು ದಂಡೆ- ಹೊಡೆಯಲು ಸಾಧ್ಯವಿಲ್ಲ. ಅಭ್ಯಾಸಮಾಡದೆಹೋದರೆ ಭಕ್ತಿ ನುಣುಚಿಹೋಗುವುದು. ಜೊತೆಗೆ ಇತರ ವಿಷಯ ವೈರಾಗ್ಯವೂ ಅತ್ಯವಶ್ಯ. ಅದಿಲ್ಲದಿದ್ದರೆ ಬಿರುಗಾಳಿಯು ಹಡಗನ್ನು ಎಲ್ಲಿಗೋ ಒಯ್ಯುವಂತೆ, ಮನಸ್ಸು ನಮ್ಮನ್ನು ಎಲ್ಲಿಗೋ ಒಗೆದುಬಿಡುತದೆ ! "ಭಕ್ತಿಯೋಗ" ವನ್ನು ಇನ್ನೂ ವಿವರಿಸಿ ಹೇಳುವುದಾದರೆ, "ಕೈಎಣ್ಣೆಯ ಧಾರೆಯಂತೆ ವಿಚ್ಛೇದವಿಲ್ಲದೆ, ಪ್ರೀತಿಯಿಂದ, ಕಣ್ಣಿಗೆ ಕಟ್ಟುವಂತೆ ದೇವರನ್ನು ನೆನಿಸಿಕೊಳ್ಳು-

ವುದೇ. " ಗಂಗಾ ಸ್ನಾನ ಐದು ನಿಮಿಷದ ಕೆಲಸ. ಅದಕ್ಕಾಗಿ ಮಾಡಿಕೊಳ್ಳುವ ಪೂರ್ವ ಸಿದ್ಧತೆ, ಹಣ, ಪ್ರಯಾಣ, ಇವುಗಳಂತೆ ಭಕ್ತಿಯ ಪೂರ್ವರಂಗವಾದ, ಕರ್ಮ, ಜ್ಞಾನಗಳೇ ಹೆಚ್ಚು ತೆಗೆದುಕೊಳ್ಳುವುವು. ಭಕ್ತನೆಂದೂ ವಿಫಲನಾಗುವುದಿಲ್ಲವೆಂದು ಕೃಷ್ಣ ಪ್ರಮಾಣಮಾಡುತ್ತಾನೆ.

ಕರ್ಮ, ಜ್ಞಾನಯೋಗಗಳನ್ನು ಉಪಾಯವೆಂದು ತಿಳಿಯದೆ, ದೇವರೊಬ್ಬನನ್ನೇ ಶರಣುಹೊಕ್ಕರೀಗ ಭಕ್ತಿಉಂಟಾಗಲು ಇರುವ ಪಾಪವೆಲ್ಲಾ ಹೋಗಿ ಭಕ್ತಿಉಂಟಾಗುವುದು ಈ ಶರಣಾಗತಿಯೇ ಕೊನೆಯ ಉಪಾಯ. ಈ " ಪ್ರಪತ್ತಿ " ಯಿಂದ್ಧ ಉದಯಿಸುವ ಭಕ್ತಿಯೋಗವೇ ಗೀತೆಯು ಹೇಳಿರತಕ್ಕ ಯೋಗ-ಉಪಾಯಗಳಲ್ಲೆಲ್ಲಾ ಮುಖ್ಯವಾದುದು.

Accn. No 6130
THE ACADEMY OF SANSKRIT RESEARCH,
MELKOTE-571431,
(KARNATAKA STATE)

# ಒಪ್ಪು

| ಸಾಲು | |
|---|---|
| ೫ | ಕಾರ್ಯವೈಕುಂಠ |
| ೧೩ | ಹೇಳಿದೆ. ಒಬ್ಬ ಬೇಡಿದರೂ |
| ೮ | ಇತರ ವಿಷಯಗಳಲ್ಲಿ |

# ರಾಮಾಯಣ ಸಪ್ತಾಹ

(ಭಾಷಣ ಸಂಗ್ರಹ)

— ಇನ್ನೇನು ಇಷ್ಟರಲ್ಲೇ ಹೊರಬೀಳುವುದು —

ರಾಮಾಯಣದ ಹದಿನೆಂಟು ವಿಷಯಗಳ ಮೇಲೆ ಪ್ರಖ್ಯಾತ
ವಿದ್ವಾಂಸರು ಮಾಡಿದ ಭಾಷಣಗಳ ಸಾರ
ಇದರಲ್ಲಿ ಅಡಕವಾಗಿದೆ.

**ಆಸ್ತಿಕರು ಓದಲೇಬೇಕಾದ ಅಮೋಘ ಪುಸ್ತಕ**

ದೊರೆಯುವ ಸ್ಥಳ :—

**ಎಸ್. ನಾಗರಾಜಯ್ಯ**
ಗೌರವ ಕಾರ್ಯದರ್ಶಿ
**ಕನ್ನಡ ಸಂಘ**
ಮೇಲುಕೋಟೆ.

ಶ್ರೀ ವಿಜಯಲಕ್ಷ್ಮೀ ಪ್ರೆಸ್, ಮೈಸೂರು